ಜನಪದ ವಿಚಾರ

ಸಂಪುಟ ೧೮
ಮಾರ್ಚ್ ೨೦೧೮
ಸಂಚಿಕೆ – ೮

ಸ್ತ್ರೀ

ಅಂದರೆ ಅಷ್ಟೇ ಸಾಕೆ..

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಮಾರ್ಚ – ೨೦೧೮
ಸಂಪುಟ – ೧೮
ಸಂಚಿಕೆ – ೮

ಸಂಚಿಕೆಯ ಸಂಪಾದಕರು

ಸಂತೋಷ್ ಕೌಲಗಿ

ಚಂದಾವಿವರ

ವಾರ್ಷಿಕ : ರೂ ೨೦೦/–

ಸಂಪರ್ಕವಿಳಾಸ

ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ – ೫೭೧೪೩೧
ಮಂಡ್ಯ ಜಿಲ್ಲೆ

ದೂರವಾಣಿ

೦೨೩೬ ೨೯೯೮೫೪
೭೮೨೯೫೮೯೧೪೭

Email : janapada@yahoo.com
web : janapada.org

ತಿಂಗಳ ಕವನ

ಕನ್ನಡಿಯ ಸೂರ್ಯ...

ನಾನಿನ್ನೂ ಸಣ್ಣ ಹುಡುಗ. ಬೋಳು ಹಣೆ, ಬರಿಗೈಯ ನನ್ನ ಅಮ್ಮ ಕೂತಿದ್ದಳು ಕಿಟಕಿಯಲಿ ಕಣ್ಣಿಟ್ಟು. ಪೂರ್ವದಲ್ಲಿ ಮೂಡಿರಲಿಲ್ಲ ಸೂರ್ಯ. ಮುಸುಕಿತ್ತು ಆಕಾಶದ ತುಂಬ ಮೆಕ್ಕೆಹಣ್ಣಂಥ ಆಷಾಢದ ಮೋಡ.

ಹನಿಯೂ ಶುರುವಾಯಿತು ಮೆಲ್ಲಗೆ. ಕಿಟಕಿ ಮುಚ್ಚಿ ಒಳಕೋಣೆಗೆ ಹೋದಳು ಅಮ್ಮ. ಸೆರಗ ಹಿಡಿದ ನಾನೂ. ಕನ್ನಡಿಯ ಮುಂದೆ ನಿಟ್ಟುಸಿರುಬಿಡುತ್ತಾ ಕೂತ ಅಮ್ಮ. ಮಳೆ ಈಗ ಜೋರಾಗಿಯೇ ಬರುತ್ತಿತ್ತು ಹೊರಗೆ.

ಕನ್ನಡಿಯಲ್ಲಿ ಕಾಣುತ್ತಿತ್ತು ಅಮ್ಮನ ಮುಖ. ಬೆಳ್ಳನೆ ಹಣೆ. ಕೆದರಿ ಹಾರಾಡುವ ಮುಡಿ. ಸುಮ್ಮನೆ ನೋಡುತ್ತಾ ಕೂತಿದ್ದಳು ಅಮ್ಮ ಕನ್ನಡಿಯಲ್ಲಿದ್ದ ತನ್ನ ಮುಖವನ್ನ. ನಡುಗುವ ಕೈಯಲ್ಲಿ ಮೆಲ್ಲಗೆತ್ತಿಕೊಂಡಳು ಕುಂಕುಮದ ಡಬ್ಬಿ.

ಬೋಳುಗನ್ನಡಿ. ತೊಟ್ಟಿಕ್ಕುವ ಮಳೆ ಹನಿ. ಇನ್ನೂ ಹದಿನೆಂಟು ತುಂಬದ ನನ್ನ ಅಮ್ಮ. ಮಳೆನಿಂತು ತೊಳೆದ ಕನ್ನಡಿಯಂಥ ಆಕಾಶ. ಮುಖವನ್ನೇ ನೋಡುತ್ತಾ ಮೆಲ್ಲಗೆ ಅಮ್ಮ ತಿದ್ದಿದಳು ಕನ್ನಡಿಯಲ್ಲಿ ದುಂಡಗೆ ಹೊಳೆವ ಸೂರ್ಯನ್ನ.

–ಎಚ್.ಎಸ್. ವೆಂಕಟೇಶಮೂರ್ತಿ

(ಕವನಕ್ಕೊಂದು ಟಿಪ್ಪಣಿ ಪುಟ ೩೨ ರಲ್ಲಿ)

ನಿಮ್ಮೊಂದಿಗೆ

ಪ್ರಿಯರೇ,

ಮಾರ್ಚ ಮಾಹೆಯ ೮ ನೇ ತಾರೀಖು, ಅಂತರ ರಾಷ್ಟ್ರೀಯ ಮಹಿಳಾ ದಿನ. ವಿಶ್ವಸಂಸ್ಥೆಯು ಈ ವರ್ಷದ ಮಹಿಳಾ ದಿನಾಚರಣೆಯಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ತಮಗೆ ಸಹಜವಾಗಿ ದೊರಕಬೇಕಾದ ಸ್ಥಾನವನ್ನು ಪಡೆದುಕೊಳ್ಳುವ ವಿಷಯದ ಕಡೆಗೆ ಒತ್ತುಕೊಟ್ಟಿದೆ. ಹಾಗೆಯೇ ಮಹಿಳೆಯರನ್ನು ಇದಕ್ಕಾಗಿ ಸಶಕ್ತರನ್ನಾಗಿಸುವ ಅಗತ್ಯತೆಯನ್ನೂ ಹೇಳಿದೆ. ಗ್ರಾಮೀಣ ಮಹಿಳೆಯರ ಹಕ್ಕಿನ ವಿಚಾರವನ್ನೂ ಮುನ್ನೆಲೆಗೆ ತಂದು ಈ ವಿಷಯಗಳ ಬಗ್ಗೆ ಸಮಾಜದ ಗಮನ ಸೆಳೆಯುವ ಉದ್ದೇಶವನ್ನು ಹೊಂದಿದೆ. ಪ್ರಪಂಚದ ಜನ ಸಂಖ್ಯೆಯ ಕಾಲು ಭಾಗ ಗ್ರಾಮೀಣ ಮಹಿಳೆಯರದ್ದಾಗಿದೆ.ಹೊರ ಪ್ರಪಂಚಕ್ಕೆ ಮಹಿಳೆಯರು ಆಧುನಿಕರಾಗುತ್ತಿರುವಂತೆ ಕಂಡರೂ ವಾಸ್ತವ ಬೇರಯೇ ಇದೆ. ಭಾರತದಂತಹ ಕೃಷಿ ಪ್ರಧಾನ ದೇಶದ ಒಂದು ಸಣ್ಣ ಹಳ್ಳಿಯನ್ನು ಗಮನಿಸಿದಾಗ ಗಂಡಸರ ಬೇಜವಾಬ್ದಾರಿ ಹೆಚ್ಚುತ್ತಾ ಇರುವುದು, ಇದರಿಂದಾಗಿ ಮಹಿಳೆಯರು ಈಗಲೇ ಹೆಚ್ಚಿರುವ ಜವಾಬ್ದಾರಿಗಳ ನಡುವೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಅನಿವಾರ್ಯವಾಗಿ ಹೊರಬೇಕಾಗಿ ಬರುತ್ತಿರುವುದು ಬಹಳ ಢಾಳಾಗಿ ಕಂಡುಬರುತ್ತಿದೆ. ಗ್ರಾಮೀಣ ಪ್ರದೇಶದಲ್ಲಿಯೂ ಕೊಳ್ಳುಬಾಕ ಸಂಸ್ಕೃತಿ, ಮಾಧ್ಯಮದ ಪರಿಣಾಮದಿಂದಾಗಿ ಹೆಚ್ಚುತ್ತಿರುವ ತಪ್ಪು ಸಾಮಾಜಿಕ ಮೌಲ್ಯಗಳು, ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳ ಖಾಸಗಿಕರಣ, ಹೀಗೆ ... ಇವೆಲ್ಲವೂ ಗ್ರಾಮೀಣ ಮಹಿಳೆಯರ ಮೇಲಿನ ಒತ್ತಡವನ್ನು ಹೆಚ್ಚಿಸುತ್ತಿವೆ. ಪುರುಷರು ಮದ್ಯಪಾನದ ವ್ಯಸನಿಗಳಾಗುತ್ತಿರುವುದು ಮಹಿಳೆಯರ ಬದುಕನ್ನು ಮತ್ತಷ್ಟು ಜರ್ಝರಿತ ಗೊಳಿಸುತ್ತಿದೆ. ಕುಟುಂಬದ ಸಮಸ್ಯೆ ನಿವಾರಿಸಿಕೊಳ್ಳಲು ಅವರು ಮೊರೆ ಹೋಗುವ ಮೈಕ್ರೋಫೈನಾನ್ಸ್ ವ್ಯವಸ್ಥೆ ಸದಾ ತಲೆಯ ಮೇಲೆ ತೂಗುತ್ತಿರುವ ಕತ್ತಿಯಂತೆ ಆಗಿ ಪ್ರತಿವಾರ ಸಂಘದ ದಿನ ಹಣ ಹೊಂದಿಸುವ ಸಲುವಾಗಿ ಅವರು ಪಡುವ ಕಷ್ಟವನ್ನೂ, ಅನುಭವಿಸುವ ಆತಂಕವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರ ಆರೋಗ್ಯದ ಮೇಲೆ ಅದು ಬೀರುತ್ತಿರುವ ದುಷ್ಪರಿಣಾಮಗಳನ್ನು ಗುರುತಿಸಬಹುದಾಗಿದೆ. ನಗರದ ಮಹಿಳೆಯರ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿರುವಂತೆ ತೋರುತ್ತಿಲ್ಲ.

ಸದ್ಯ ಸಮಾಜ ಸಾಗ ಬಯಸುತ್ತಿರುವ ದಿಕ್ಕನ್ನು ಗಮನಿಸಿದರೆ ಮಹಿಳೆಯರು ಇನ್ನೂ ಎಷ್ಟು ವರ್ಷ ಅವರ ನಿದ್ದೆ ಇಲ್ಲದ ರಾತ್ರಿಗಳನ್ನು ಕಳೆಯಬೇಕಿದಿಯೋ ಊಹಿಸುವುದು ಕಷ್ಟ.

ಜನಪದ ವಿಚಾರದ ಈ ಸಂಚಿಕೆಯನ್ನು ಮಹಿಳೆಯರನ್ನು ಕೇಂದ್ರವಾಗಿಟ್ಟು ರೂಪಿಸಿದ್ದೇವೆ. ಈ ಪತ್ರಿಕೆ ರೂಪಿಸಲು ನೆರವಾದ ಲೇಖಕರಿಗೂ, ಕಲಾಕಾರರಿಗೂ ವಂದನೆಗಳು.

ನಿಮಗೆ ಈ ಸಂಚಿಕೆ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇವೆ.

ವಂದನೆಗಳು.

ಗಾಂಧೀಜಿಯವರ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆಯ ಸ್ವರೂಪ

–ಮಧು ಕಿಶ್ವರ್

ಈ ಬರಹದ ಲೇಖಕಿ ಮಧು ಕಿಶ್ವರ್ ಅವರು ಹೋರಾಟಗಾರರು ಮತ್ತು ವಿದ್ವಾಂಸರು. ತಮ್ಮ ಈ ಲೇಖನದಲ್ಲಿ ಮಹಿಳೆಯರ ಬಗ್ಗೆ ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿ ಅವುಗಳ ಪ್ರಸ್ತುತತೆ ಮತ್ತು ಪ್ರಾಮುಖ್ಯತೆಯನ್ನು ವಿಶ್ಲೇಷಿಸಿದ್ದಾರೆ. ಈ ಬರಹವನ್ನು ಕನ್ನಡಕ್ಕೆ ಶ್ರೀ ಮಹಾಬಲೇಶ್ವರರಾವ್ ಅನುವಾದಿಸಿದ್ದಾರೆ. ಇದನ್ನು 'ಗಾಂಧೀಜಿ ಮತ್ತು ಮಹಿಳೆಯರು' ಪುಸ್ತಕದಿಂದ ಆಯ್ದು ಕೊಳ್ಳಲಾಗಿದೆ.

'ಸಂಪ್ರದಾಯದ ಹೊಳೆಯಲ್ಲಿ ಈಜುವುದು ಒಳ್ಳೆಯದು, ಆದರೆ ಅದರಲ್ಲಿ ಮುಳುಗುವುದು ಆತ್ಮಘಾತುಕ' – ಗಾಂಧೀಜಿಯವರ ಈ ಮಾತು ಒಂದು ರೀತಿಯಲ್ಲಿ ಅವರ ಒಟ್ಟು ಸಾಮಾಜಿಕ, ರಾಜಕೀಯ ಸಿದ್ಧಾಂತ ಹಾಗೂ ಸಾಮೂಹಿಕ ಕಾರ್ಯತಂತ್ರಕ್ಕೆ ದ್ಯೋತಕ. ಸಮಕಾಲೀನವಾದ ಸಾಮಾಜಿಕ, ರಾಜಕೀಯ ಸಂದೇಶವನ್ನು ಸಾರಲು ಅವರು ಬಳಸುತ್ತಿದ್ದ ಸಾಂಪ್ರದಾಯಿಕ ಭಾರತೀಯ ಸಂಕೇತಗಳಲ್ಲಿ ಇದು ಹೆಚ್ಚು ನಿಚ್ಚಳವಾಗಿದೆ. ದಮನಕ್ಕೊಳಗಾದ ಭಾರತೀಯ ಮಹಿಳೆಯರಿಗೆ ಸೀತೆ, ದಮಯಂತಿ ಹಾಗೂ ದ್ರೌಪದಿ – ಈ ಮೂವರು ಆದರ್ಶ ನಾರಿಯರೇ ಸ್ಫೂರ್ತಿಯಾಗಬೇಕೆಂದು ಗಾಂಧೀಜಿಯವರು ಪದೇಪದೇ ಹೇಳುತ್ತಿದ್ದರು. ಆದರೆ ಗಾಂಧೀಯವರ ಸೀತೆ ಅಥವಾ ದ್ರೌಪದಿ ಎಲ್ಲರೂ ಒಪ್ಪಿಕೊಂಡಿರುವ ನಿರ್ಜೀವವಾದ, ದಾಸ್ಯದ ಪ್ರತೀಕಗಳಲ್ಲ; ಗುಣಸಂಪನ್ನರಾದ ಕ್ರಿಯಾಶೀಲ ಪ್ರತಿಮೆಗಳು. ಕೆಲವೊಮ್ಮೆ ಗಾಂಧೀಯವರು ಸಂಕೇತಗಳಿಗೆ ಅವು ಹೊರಲಾರದ ಅರ್ಥವನ್ನು ಹೊರಿಸುತ್ತಿದ್ದರು. ಉದಾಹರಣೆಗೆ, ಸಾಮ್ರಾಜ್ಯಶಾಹಿ ವಿರೋಧದ ಸಂದೇಶ ಸಾರಲು ಸೀತೆಯನ್ನು 'ಸ್ವದೇಶಿ'ಯ ಸಂಕೇತವಾಗಿ ಬಳಸಿದರು. "ಸೀತೆಯು ಭಾರತದಲ್ಲಿ ಸಿದ್ಧವಾದ ಉಡುಪನ್ನು ಅಥವಾ ಮನೆಯಲ್ಲಿ ನೇಯ್ದೆ ಬಟ್ಟೆಯನ್ನು ಧರಿಸುತ್ತಿದ್ದಳು. ಆದ್ದರಿಂದಲೇ ಆಕೆ ತನ್ನ ದೇಹ ಮತ್ತು ಹೃದಯವನ್ನು ಪವಿತ್ರವಾಗಿಟ್ಟುಕೊಂಡಿದ್ದಳು"; "ಸೀತೆಯು ರಾಮನ ದಾಸಿಯಲ್ಲ"; ಹೆಚ್ಚೇಕೆ, "ಆಕೆಯ ಮನಸ್ಸಿಗೆ ವಿರುದ್ಧವಾಗಿ ದೇಹ ಸುಖ ಪಡೆಯಲು ಪತಿ ಬಯಸಿದರೆ 'ಸಾಧ್ಯವಿಲ್ಲ' ಎಂದು ಹೇಳುವ ಶಕ್ತಿ ಸೀತೆಗೆ ಇತ್ತೆಂದು" ಬಣ್ಣಿಸಲಾಗಿದೆ. ಗಾಂಧೀಯವರ ಸೀತೆ 'ಪಾಪದ ಪ್ರಾಣಿ'ಯಲ್ಲ. ರಾವಣನ ಮಹಾನ್ ದೇಹಬಲ ಕೂಡ ಸೀತೆಯ ಉನ್ನತ ನೈತಿಕ ಸ್ಥೈರ್ಯದ ಎದುರು ಕುಂದಿತು. ಗಾಂಧೀಯವರ ದೃಷ್ಟಿಯಲ್ಲಿ ಭಾರತೀಯ ಮಹಿಳೆಯರು ಅನುಸರಿಸಬೇಕಾದ ಆದರ್ಶ ಇದು: ಮಹಿಳೆಯರು ತಮ್ಮನ್ನು ತಾವು ಅಬಲೆಯರೆಂದು ಭಾವಿಸದೆ "ತನ್ನ ಪ್ರಬಲ ಇಚ್ಛಾಶಕ್ತಿಗೆ ಅನುಗುಣವಾಗಿ ಬಲಶಾಲಿ ಭೀಮನನ್ನು ಬಗ್ಗಿಸಿದ ಚೈತನ್ಯದಾಯಿ ಸ್ವಾತಂತ್ರ್ಯದ ಸಂಕೇತವಾದ" ದ್ರೌಪದಿ ಎಂದು ಭಾವಿಸಬೇಕು. ಸೀತೆ

"ಸೌಕುಮಾರ್ಯದ ಸಾಕ್ಷಾತ್ಕಾರ.. ಮೃದುವಾದ ಪುಷ್ಪ". ಬಲ ಹಾಗೂ ದೃಢ ಮನೋಭಾವದಲ್ಲಿ ದ್ರೌಪದಿಯಾದರೋ 'ಮಹಾನ್ ದೇವದಾರು'; ಧೈರ್ಯ, ಸ್ಥೈರ್ಯ ಹಾಗೂ ನಿರ್ಭೀತಿಯ ಸಂಕೇತ. ಸೀತೆಯಿಂದ ದ್ರೌಪದಿಯವರೆಗಿನ ಸಂಕ್ರಮಣದಲ್ಲಿ ಗಾಂಧೀಜಿಯವರಿಗೆ ಯಾವ ವೈರುಧ್ಯಗಳೂ ಕಾಣಲಿಲ್ಲ.

ಮಹಿಳೆಯರು ಸ್ವತಂತ್ರರಾಗಬೇಕಾದರೆ ಅವರು ನಿರ್ಭೀತರಾಗಿರಬೇಕು. ಮಹಿಳೆಯರ ದೈಹಿಕ ದೌರ್ಬಲ್ಯಕ್ಕಿಂತಲೂ ಸಮಾಜ ಅವರ ಮೇಲೆ ವಿಧಿಸಿರುವ ಸಾಂಸ್ಕೃತಿಕ ಅಸಹಾಯಕತೆ, ಮಾನಸಿಕ ಭಯ ಇವೇ ಮುಂತಾದವು ಅವರ ಶಕ್ತಿ ಉಡುಗಿಸಿವೆ ಎಂದು ಗಾಂಧೀಜಿಯವರು ಮನಗಂಡಿದ್ದರು. ಶೌರ್ಯ ಸಾಹಸಗಳು ಗಂಡಸರ ಗುತ್ತಿಗೆಯಲ್ಲ ಎಂದು ಅವರು ಮಹಿಳೆಯರಿಗೆ ಪದೇಪದೇ ಹೇಳುತ್ತಿದ್ದರು. ಎಲ್ಲ ಮಹಿಳೆಯರು ಝಾನ್ಸಿರಾಣಿಯರಾಗಲು ಸಾಧ್ಯವಿಲ್ಲ: ಆದರೆ ಅವರು ಸೀತೆಯ ಆದರ್ಶವನ್ನು ಅನುಸರಿಸಬಹುದು."ಸೀತೆಯ ನಿದರ್ಶನವನ್ನು ಕಟ್ಟುಕತೆಯೆಂದು ಯಾರೂ ನಿರಾಕರಿಸಬೇಡಿ. ಇಂಥ ಅತ್ಯುನ್ನತವಾದ ಶೌರ್ಯವನ್ನು ಭಾರತೀಯ ನಾರೀ ಲೋಕ ಆತ್ಮಸಾತ್ ಮಾಡಿಕೊಳ್ಳಬೇಕು" ಎಂದು ಅವರು ಬಯಸಿದರು. ಪತಿಯ ಜೊತೆಗೆ ಅಥವಾ ಚಿತೆಯ ಮೇಲೆ ಇದ್ದಾಗ ಮಾತ್ರವೆ ತನಗೆ ಸುಖವೆಂದು ಭಾವಿಸುವಂತೆ ಮಹಿಳೆಯರನ್ನು ನಮ್ಮಲ್ಲಿ ಬೆಳೆಸಲಾಗಿದೆ. ಭಾರತೀಯ ಮಹಿಳೆಯರು ತಾವು ಅಸಹಾಯಕರೆಂದು ಭಾವಿಸುವುದಕ್ಕಿಂತ ಶಸ್ತ್ರಾಸ್ತ್ರಗಳ ನಿರ್ವಹಣೆಯಲ್ಲಿ ತರಬೇತಿ ಪಡೆಯಬೇಕೆಂದು ಅವರು ನಿರೀಕ್ಷಿಸಿದರು. ಆದರೆ ಗಾಂಧೀಯವರ ದೃಷ್ಟಿಯಲ್ಲಿ ಶಸ್ತ್ರಗಳು ದೌರ್ಬಲ್ಯದ ಸಂಕೇತ. ಸ್ತ್ರೀಯ ನಿಜವಾದ ಶಕ್ತಿ ಆಕೆಯ 'ಪಾವಿತ್ರ್ಯ ಹಾಗೂ ಪಾತಿವ್ರತ್ಯ'ದ ಪ್ರಜ್ಞೆ. 'ಥಳಥಳಿಸುವ ಈ ಪಾವಿತ್ರ್ಯವು' ಪಾಶವೀ ಸ್ವಭಾವದ ಗಂಡಸರನ್ನು ನಿರಾಯುಧರನ್ನಾಗಿಸಬಹುದು. ಸ್ತ್ರೀಯ ಶೀಲವೇ ಆಕೆಯನ್ನು ರಕ್ಷಿಸುತ್ತದೆ. ಏನೇ ಆಗಲಿ, ಆಕೆ ತನ್ನ ಶೀಲವನ್ನು ಕಳೆದುಕೊಳ್ಳುವ ಬದಲು ಪ್ರಾಣ ಕಳೆದುಕೊಳ್ಳುವುದು ಮೇಲು. ಇದು ಪುರುಷನ ಆಕ್ರಮಣದ ವಿರುದ್ಧ ಮಹಿಳೆ ತನ್ನನ್ನು ರಕ್ಷಿಸಿಕೊಳ್ಳಬೇಕಾದ ರೀತಿಯನ್ನು ಕುರಿತು ಗಾಂಧೀಯವರ ನಿಖರ ಉಪದೇಶ. ಸ್ವತಃ ತನಗೇ ಈ ಬಗೆಯ ಎದೆಗಾರಿಕೆ ಅಸಾಧ್ಯವೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ನಿಜಕ್ಕೂ ಪ್ರತಿವ್ರತೆಯಾದ ಮತ್ತು ಸಾಹಸಿಯಾದ ನಾರಿಯೊಬ್ಬಳಿಗೆ ಪಾತಿವ್ರತ್ಯದ ಬಲಿಪೀಠದಲ್ಲಿ ತನ್ನ ಪ್ರಾಣ ಅರ್ಪಿಸಲು ಕಷ್ಟವಾಗದೆಂದು ಅವರು ಖಚಿತವಾಗಿ ಭಾವಿಸಿದ್ದರು. ಮಹಿಳೆಯರು ದ್ರೌಪದಿಯಂತೆ 'ಆತ್ಮನಿರ್ಭರ'ರಾಗಿರಬೇಕು. "ದ್ರೌಪದಿಯನ್ನು ಯಾರು ತಾನೆ ಪರಾವಲಂಬಿ ಎಂದು ಕರೆಯುತ್ತಾರೆ? ಪಾಂಡವರು ಅವಳನ್ನು ರಕ್ಷಿಸಲು ವಿಫಲರಾದಾಗ ಆಕೆ ಕೃಷ್ಣನಿಗೆ ಮೊರೆಹೋಗಿ ತನ್ನನ್ನು ತಾನು ರಕ್ಷಿಸಿಕೊಳ್ಳಲಿಲ್ಲವೇ?" ಇಲ್ಲಿ ಕೃಷ್ಣನು ಭೌತಿಕ ಅಸ್ತಿತ್ವವುಳ್ಳ ಮನುಷ್ಯನನ್ನು ಪ್ರತಿನಿಧಿಸುವುದಿಲ್ಲ. ಭಗವದ್ಗೀತೆಯಲ್ಲಿ ಹೇಳಿರುವಂತೆ ಆತ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದ ಧ್ವನಿ; ಬಯಸಿದ ಹಾದಿಯಲ್ಲಿ ನಡೆಯಲು ಬೇಕಾದ ದೃಢ ಇಚ್ಛೆ.

ಸಾಂದರ್ಭಿಕವಾಗಿ ಪ್ರಸ್ತುತವೆನಿಸುವ ಝಾನ್ಸಿರಾಣಿಯ ಸಂಕೇತವನ್ನು ಗಾಂಧೀಯವರು ಮತ್ತೆ ಮತ್ತೆ ಬದಿಗೊತ್ತಿ ಸೀತೆ ದ್ರೌಪದಿಯರ ಗುಣಗಳ ಸಮ್ಮಿಶ್ರಿತ ಸಂಕೇತವನ್ನು ಹೆಚ್ಚು ಇಷ್ಟಪಟ್ಟರೆಂಬುದು ಮಹತ್ವಪೂರ್ಣವಾದ ಅಂಶ. ಏಕೆಂದರೆ ಮಹಿಳೆಯ ವೈಯಕ್ತಿಕ ಶಕ್ತಿ ಹಾಗೂ ಅದನ್ನು ವೃದ್ಧಿಸುವ ವಿಧಾನಗಳಲ್ಲಿ ಅವರು ಸಮಸ್ಯೆಗೆ ಪರಿಹಾರ ಹುಡುಕ ಬಯಸಲಿಲ್ಲ. ಬದಲಿಗೆ ಮಹಿಳೆಯರ ಆಧ್ಯಾತ್ಮಿಕ ಹಾಗೂ ನೈತಿಕ ಸ್ಥೈರ್ಯದ ಕಕ್ಷೆಯಲ್ಲಿ ಅವರು ಉತ್ತರ ಬಯಸಿದರು.

ಗಾಂಧೀಯವರು ಶೌರ್ಯ ಸಾಹಸಗಳ ಪ್ರದರ್ಶನಕ್ಕೆ ಹೆಚ್ಚು ಒತ್ತು ಕೊಡಲಿಲ್ಲ. ಬದಲಿಗೆ ಅವರು ಹೆಣ್ಣಿನ ಧೈರ್ಯದ ಒಂದು ನಿರ್ದಿಷ್ಟ ನಮೂನೆಯನ್ನು ಆಯ್ಕೆ ಮಾಡಿಕೊಂಡರು. ಮಹಿಳೆಯರೇ ಸಮಾಜದಲ್ಲಿ ಉನ್ನತ ಮಟ್ಟದ ನೈತಿಕ ಶಕ್ತಿಯ ದ್ಯೋತಕ ಎಂಬ ಅವರ ದೃಷ್ಟಿಯನ್ನು ಈ ಆಯ್ಕೆಯು ಬಿಂಬಿಸುತ್ತದೆ. ಮಹಿಳೆಯರು ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ರಾಜ-ಕೀಯ ಅಧಿಕಾರ ಸಂಪಾದನೆಗಾಗಿ ಬಲಪ್ರಯೋಗ ಹಾಗೂ ಶೌರ್ಯ ಪ್ರದರ್ಶನ ಮಾಡುವುದಕ್ಕಿಂತ ಆತ್ಮಬಲಿದಾನ ಮಾಡುವುದು ಮತ್ತು ಯಾತನೆಯನ್ನು ಅನುಭವಿಸುವುದು ಮೇಲು ಎಂಬುದನ್ನು ಅವರ ಈ ದೃಷ್ಟಿಯು ಒತ್ತಿ ಹೇಳುತ್ತದೆ.

ಸಾಮಾಜಿಕ ನೀತಿ-ನಿಯಮಗಳನ್ನು ಮಹಿಳೆಯರ ಮೇಲೆ ಬಲಾತ್ಕಾರವಾಗಿ ಹೇರದೆ "ಪರಸ್ಪರ ಸಮಾಲೋಚನೆ ಮತ್ತು ಸಹಕಾರ"ದಿಂದ ರೂಪಿಸಬೇಕು. "ಎಂದಾದರೊಮ್ಮೆ ತಾನು ಜೀತ ಮುಕ್ತನಾಗಬಹುದು ಎಂದು ಯೋಚಿಸಲಾರದ ಹಳೆಯ ಕಾಲದ ಗುಲಾಮ" ರಂತೆ ಹೆಂಗಸರನ್ನು ಗಂಡಸರು ನಿರ್ಲಕ್ಷಿಸಿದ್ದರು. "ಶಾಸನಗಳನ್ನು ಬಹುತೇಕ ಗಂಡಸರೇ ರೂಪಿಸುತ್ತಿದ್ದರು. ಈ ಸ್ವಪೋಲ ಕಲ್ಪಿತ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಗಂಡಸು ನ್ಯಾಯ ಪರನಾಗಿ, ವಿವೇಚನಾಶೀಲನಾಗಿ ವರ್ತಿಸುತ್ತಲಿಲ್ಲ". ಆದ್ದರಿಂದ ಸ್ತ್ರೀಯರಿಗೆ ನ್ಯಾಯ ದೊರೆಯಬೇಕಾದರೆ ಶಾಸ್ತ್ರ ಗ್ರಂಥಗಳನ್ನು ಪುನರ್ ಪರಿಷ್ಕರಿಸಬೇಕು. ಮಹಿಳೆಯರ ಘನತೆ. ಗೌರವ, ಹಕ್ಕು ಬಾಧ್ಯತೆಗಳಿಗೆ ವಿರುದ್ಧವಾಗಿರುವ ಎಲ್ಲ ಧರ್ಮಗ್ರಂಥಗಳನ್ನು ನಿಷೇಧಿಸಬೇಕು. ಈ ಕೆಲಸಕ್ಕಾಗಿ ಭಾರತೀಯ ನಾರಿಯರು "ದೃಢಚಿತ್ತನೆ, ಆತ್ಮನಿಗ್ರಹ ಮತ್ತು ಪರಿಶುದ್ಧಯುಳ್ಳ" ಹೊಸ ಸೀತೆ, ದ್ರೌಪದಿ, ಹಾಗೂ ದಮಯಂತಿಯರನ್ನು ಸೃಷ್ಟಿಸಬೇಕು. ಈ ಸೀತೆ, ದ್ರೌಪದಿ, ದಮಯಂತಿಯರ "ಮಾತುಗಳಿಗೆ ಶಾಸ್ತ್ರ ಗ್ರಂಥಗಳಷ್ಟೇ ಮಹತ್ತರ ದೊರೆಯಲಿದೆ ಮತ್ತು ಹಿಂದಿನ ಸೀತೆ, ದ್ರೌಪದಿ, ದಮಯಂತಿಯರಿಗೆ ದೊರೆತಷ್ಟೇ ಗೌರವ ಆಧುನಿಕ ನಾರಿಯರಿಗೂ ದೊರೆಯಲಿದೆ.

"ಮೈತ್ರೇಯಿ, ಗಾರ್ಗಿ, ಸಾವಿತ್ರಿ ಮುಂತಾದ ಪ್ರಾಚೀನ ಭಾರತೀಯ ಸ್ತ್ರೀಯರನ್ನು ರೂಪಿಸಿದ ಕೆಚ್ಚುನೆಚ್ಚು, ಸ್ವತಂತ್ರ ಚಿಂತನಶಕ್ತಿ, ಉತ್ಸಾಹ ಮುಂತಾದ ಸಾತ್ವಿಕ ಗುಣಗಳನ್ನು ಬಹುತೇಕ ಭಾರತೀಯ ಮಹಿಳೆಯರು 'ಸಾಮಾಜಿಕ ದಬ್ಬಾಳಿಕೆಯ ಪರಿಣಾಮವಾಗಿ' ಕಳೆದುಕೊಂಡಿದ್ದಾರೆ. ಆದ್ದರಿಂದಲೇ ಮಹಿಳಾ ವಿಮೋಚನೆಯ ಗುರಿಯನ್ನು ಕಾಂಗ್ರೆಸ್ಸಿಗರ ಮುಂದಿಡಲಾಯಿತು. "ಕಾಂಗ್ರೆಸ್ಸಿಗರು ತಂತಮ್ಮ ಮನೆಗಳಿಂದಲೆ ಆರಂಭ ಮಾಡಲಿ". ಅವರು ತಮ್ಮ ತಾಯಂದಿರು, ಹೆಂಡಂದಿರು ಹಾಗೂ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಈ ಕೆಲಸವನ್ನು ಆರಂಭಿಸತಕ್ಕದ್ದು. "ಸ್ವಾತಂತ್ರ್ಯ ಪ್ರತಿಯೊಂದು ರಾಷ್ಟ್ರದ ಮತ್ತು ವ್ಯಕ್ತಿಯ ಜನ್ಮಸಿದ್ಧ ಹಕ್ಕು" ಎಂದು ಅವರು ನಂಬುವುದಾದರೆ ಮತ್ತು ಅದನ್ನು ಸಾಧಿಸಲು ದೃಢ ಸಂಕಲ್ಪ ಮಾಡಿರುವುದಾದರೆ ಸರ್ವಾಂಗೀಣವೂ ಆರೋಗ್ಯಕರವೂ ಆದ ಅಭಿವೃದ್ಧಿಯನ್ನು ನಿರ್ಬಂಧಿಸುವ ದುಷ್ಟ ಸಂಪ್ರದಾಯಗಳಿಂದ ತಮ್ಮ ಹೆಂಗಸರನ್ನು "ಮೊದಲು ಅವರು ಬಿಡುಗಡೆಗೊಳಿಸಬೇಕು". ಬೇರೆಲ್ಲದಕ್ಕಿಂತಲೂ ರಾಜಕೀಯ ಹೋರಾಟಕ್ಕೆ ಹೆಚ್ಚಿನ ಮಹತ್ವ ಸಲ್ಲಿಸಬೇಕೆಂದು ವಾದಿಸಿದವರಿಗೆ ಗಾಂಧೀ ಹೀಗೆ ಉತ್ತರ ನೀಡಿದರು. "ಸ್ವರಾಜ್ಯ ಸಂಪಾದನೆಯಾಗುವವರೆಗೂ ಸಮಾಜ ಸುಧಾರಣೆಯ ಗುರಿಯನ್ನು ಮುಂದೂಡಬೇಕೆಂದರೆ ಸ್ವರಾಜ್ಯದ ಅರ್ಥವನ್ನೇ ತಿಳಿದಿಲ್ಲ ಎಂದಂತಾಯಿತು".

ನಿಡುಗಾಲದಿಂದಲೂ ಮಹಿಳೆಯರನ್ನೂ ಮನೆಗಳಲ್ಲಿ, ಮನೆಯ ಹೊರಗಿನ ಪುಟ್ಟ ಅಂಗಳದಲ್ಲಿ ನಿರ್ಬಂಧಿಸಿರುವುದರಿಂದಾಗಿ ಅವರ ವ್ಯಕ್ತಿತ್ವದ ಮೇಲೆ ಮಾರಕ ಪರಿಣಾಮ

ಉಂಟಾಗಿದೆ. ಅವರ ಲೋಕ ದೃಷ್ಟಿ ಸೀಮಿತಗೊಂಡಿದೆ. ಆಸಕ್ತಿಗಳು ಕ್ಷುಲ್ಲಕ ವಿಷಯಗಳಿಗಷ್ಟೇ ಸೀಮಿತಗೊಂಡಿವೆ. ವಿವಿಧ ಸಭೆಗಳಲ್ಲಿ ಮಹಿಳೆಯರನ್ನು ಉದ್ದೇಶಿಸಿ ಮಾತಾನಾಡಿದ ಗಾಂಧೀಯವರು, "ಸ್ತ್ರೀಯರು ಕೆಲವೊಮ್ಮೆ ಅಸಹನೀಯವಾಗಿ ಗದ್ದಲ ಮಾಡುತ್ತಾರೆ. ತತ್‌ಕ್ಷಣದ ಬದುಕಿನಾಚೆಗಿನ ದೊಡ್ಡ ಸಮಸ್ಯೆಗಳಲ್ಲಿ ಅವರ ಆಸಕ್ತಿ ಕುದುರಿಸುವುದು ಕಷ್ಟ; ಏಕೆಂದರೆ ಸ್ವಾತಂತ್ರ್ಯದ ಸ್ವಚ್ಛ ಗಾಳಿಯಲ್ಲಿ ಉಸಿರಾಡಲು ಎಂದೂ ಅವರಿಗೆ ಅವಕಾಶ ದೊರೆಯಲಿಲ್ಲ; ಎಂದು ಭಾವಿಸಿದ್ದರು. ಸ್ವಾತಂತ್ರ್ಯವನ್ನು ನಿರಾಕರಿಸುವ ಈ ಪ್ರವೃತ್ತಿಯು ಮಹಿಳೆಯರಲ್ಲಿ ಬಾಲಿಶ ಮನೋಭಾವನೆಯ ಬೆಳವಣಿಗೆಗೆ ಕಾರಣವಾಗುವುದು ಮಾತ್ರವಲ್ಲದೆ ಅದು ಈ ಬಗೆಯ ನಿರಾಕರಣೆಯನ್ನು ನ್ಯಾಯಬದ್ಧಗೊಳಿಸುವ, "ನೈತಿಕ ಪ್ರಜ್ಞೆಗೆ ಒಗ್ಗದ" ಧರ್ಮಶಾಸ್ತ್ರಗಳನ್ನು ವಿರೋಧಿಸಲೂ ಆಗದ ಪ್ರವೃತ್ತಿಗೆ ಕಾರಣವಾಗುತ್ತದೆ. ಆದ್ದರಿಂದ ಇದು ಕೊನೆಗೊಳ್ಳಬೇಕು. ವಾಸ್ತವವಾಗಿ, ಗಾಂಧೀಯವರ ಪ್ರಕಾರ ಹಿಂದೂ ಧರ್ಮದ ಮೂಲ ಮಂತ್ರವೇ ಪೂರ್ಣ ಸ್ವಾತಂತ್ರ್ಯ. ಆತ್ಮ ಸಾಕ್ಷಾತ್ಕಾರಕ್ಕಾಗಿಯೇ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಅದರ ಸಾಧನೆಗಾಗಿ ತನಗೆ ಸರಿಕಂಡ ರೀತಿಯಲ್ಲಿ ನಡೆದುಕೊಳ್ಳಬಹುದು. ಆದರೆ ಒಂದು ನಿಶ್ಚಿತ ಚೌಕಟ್ಟಿನಲ್ಲಿ ಮಾತ್ರ ಈ ಪೂರ್ಣ ಸ್ವಾತಂತ್ರ್ಯ ಲಭ್ಯವಿದೆ. ಮಹಿಳೆಯರ ಏಳಿಗೆಗೆ ಗಾಂಧೀಯವರ ಪ್ರಮುಖ ಕೊಡುಗೆ ಎಂದರೆ ಕುಟುಂಬ ಹಾಗೂ ಸಮಾಜ ಜೀವನದಲ್ಲಿ ಮಹಿಳೆಯರ ಘನತೆ ಹಾಗೂ ಸ್ವಾತಂತ್ರ್ಯಗಳಿಗಾಗಿ ಮುಕ್ತಕಂಠದಿಂದ ಒತ್ತಾಯಿಸಿದ್ದು. "ಗಂಡಸು ಹೆಂಗಸನ್ನು ತನ್ನ ಸಾಧನವೆಂದು ಬಗೆದಿದ್ದಾನೆ. ಹೆಂಗಸು ಕೂಡ ಗಂಡಸಿನ ಸಾಧನವಾಗಲು ಕಲಿತಿದ್ದಾಳೆ. ಹೀಗೆ ಆಗುವುದೇ ಸುಲಭ ಮತ್ತು ಆನಂದದಾಯಕವೆಂದು ಕಂಡುಕೊಂಡಿದ್ದಾಳೆ. ಏಕೆಂದರೆ ತಾನು ಬಿದ್ದು ಇನ್ನೊಬ್ಬರನ್ನೂ ತನ್ನತ್ತ ಸೆಳೆದುಕೊಂಡಾಗ ಅವನತಿ ಸುಲಭವಾಗುತ್ತದೆ ಎಂಬುದನ್ನು ಗಾಂಧೀಯವರು ತಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಅನುಭವದಿಂದ ಮನಗಂಡಿದ್ದರು. "ಯಾವುದೇ ಬಗೆಯ ಅನಿಷ್ಟಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಭಾರತೀಯ ಮಹಿಳೆಯಲ್ಲಿ ಇಲ್ಲ" ಎಂದೆನ್ನುವವರ ಅಭಿಪ್ರಾಯಗಳನ್ನು ಅವರು ಮಾನ್ಯ ಮಾಡಿದ್ದರು. ಆದರೂ ಮಹಿಳೆಯರು ತಮ್ಮ ಉದ್ಧಾರದ ಹೊಣೆಯನ್ನು ತಾವೇ ಹೊರಬೇಕೆಂದು ಅವರು ಒತ್ತಿ ಹೇಳಿದರು. "ಈ ಸ್ಥಿತಿಗೆ ಗಂಡಸೇ ಮೂಲಕಾರಣ ಎಂಬುದು ನಿಸ್ಸಂಶಯ. ಆದರೆ ಅನೇಕ ಮಹಿಳೆಯರು ಸದಾ ಗಂಡಸರ ಮೇಲೆ ಗೂಬೆಕೂರಿಸಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಾರೆ. ಆದರೆ ಪ್ರಜ್ಞಾವಂತರಾದ ಮಹಿಳೆಯರು ತಮ್ಮ ಸಹೋದರಿಯರಿಗೆ ಬಾಧ್ಯಸ್ತರಲ್ಲವೆ? ಗಂಡಸರಿಗೆ ತಾಯಂದಿರಾದ ಇವರು ಸುಧಾರಣೆಯ ಹೊಣೆಯನ್ನು ಹೊರಬಾರದೆ? ಬಾಲವಿಧವೆಯರು ಹಾಗೂ ಬಾಲಿಕಾ ವಧುಗಳ ನಡುವೆ ಇದ್ದುಕೊಂಡು ಅವರ ಏಳಿಗೆಗಾಗಿ ದುಡಿಯುವ ದಿಟ್ಟ ಮಹಿಳೆಯರು ಎಲ್ಲಿದ್ದಾರೆ? ತಾನು ಪ್ರಾಯಪ್ರಬುದ್ಧಳಾಗದ ಹೊರತು ಮದುವೆಯಾಗುವುದಿಲ್ಲ ಮತ್ತು ತನ್ನ ಆಯ್ಕೆಯ ಪುರುಷನನ್ನಲ್ಲದೆ ಇನ್ನೊಬ್ಬನನ್ನು ಮದುವೆಯಾಗುವುದಿಲ್ಲ ಎಂದು ಪ್ರತಿಯೊಬ್ಬ ಹುಡುಗಿಯೂ ಹೇಳುವ ಶಕ್ತಿ ಗಳಿಸುವ ತನಕ ವಿಶ್ರಾಂತಿ ಪಡೆಯಲಾರೆ ಎಂದು ಸಾರುವ ದಿಟ್ಟ ಮಹಿಳೆಯರೆಲ್ಲಿ?" ತಮ್ಮ ಹಿತದೃಷ್ಟಿಯಿಂದ "ಮಹಿಳೆಯರ ಏಳಿಗೆಗಾಗಿ ಪುರುಷರು ನೆರವಾಗಬೇಕು. ಆದರೆ ಕೊನೆಗೂ ತನಗೇನುಬೇಕೆಂಬುದನ್ನು ಮಹಿಳೆಯೇ ಧೃಢವಾಗಿ ನಿರ್ಧರಿಸಬೇಕು".

"ಹೆಂಡಂದಿರನ್ನು ಕಾಮದ ಗೊಂಬೆಗಳಂತೆ, ದೇಹದ ಹಸಿವು ತಣಿಸುವ ವಸ್ತುಗಳಂತೆ ನೋಡಬಾರದು. ಸಮಾಜ ಸೇವೆಯಲ್ಲಿ ತೊಡಗಿರುವ ಗೌರವಾನ್ವಿತ ಸಂಗಾತಿಯಂತೆ

ನಡೆಸಿಕೊಳ್ಳಬೇಕು". ಹೆಂಗಸರು ಕೂಡ ತಮ್ಮನ್ನು ಕಾಮದ ಆಟಿಕೆಗಳಂತೆ ನೋಡುವ ಪ್ರವೃತ್ತಿಯನ್ನು ವಿರೋಧಿಸಬೇಕು. "ಲೋಕ ವ್ಯವಹಾರಗಳನ್ನು ನೀವು ನಿಮ್ಮ ಪಾತ್ರವನ್ನು ನಿರ್ವಹಿಸಬೇಕೆಂದಿದ್ದರೆ ಗುಂಡಿನ ತೃಪ್ತಿಗಾಗಿ ಸಿಂಗಾರ ಮಾಡಿಕೊಳ್ಳುವುದನ್ನು ವಿರೋಧಿಸಿ", ಅಷ್ಟು ಮಾತ್ರವಲ್ಲದೆ, "ಹೆಣ್ಣು ಹುಟ್ಟಿದ್ದೇ ಗಂಡಿನ ಆಟಿಕೆಯಾಗಲು ಎಂದು ತನ್ನ ಹಕ್ಕು ಚಲಾಯಿಸುವ ಗಂಡಸಿನ" ವಿರುದ್ಧ ಸಿಡಿದೇಳಬೇಕು. ಸೀತೆಯು ದೇಹ ಸೌಂದರ್ಯದಿಂದ ತನ್ನ ರಾಮನನ್ನು ಸಂಪ್ರೀತಗೊಳಿಸಲು ಒಂದೇ ಒಂದು ನಿಮಿಷವನ್ನು ಹಾಳು ಮಾಡಿದವಳಲ್ಲ ಎಂಬ ಕಾರಣದಿಂದಾಗಿ ಗಾಂಧೀಯವರು ಸದಾ ಚೈತನ್ಯದಾಯಿಯಾದ ಸೀತೆಯ ಸಂಕೇತವನ್ನು ನೆನಪು ಮಾಡಿಕೊಡುತ್ತಾರೆ. ಸ್ತ್ರೀತ್ವದ ಪರಿಶುದ್ಧತೆ ಹಾಗೂ ಘನತೆಯನ್ನು ಅವರು ಕಾಮರಹಿತತೆಯೊಂದಿಗೆ ಸಮೀಕರಿಸುತ್ತಾರೆ.

ಮಹಿಳೆಯರ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಗೌರವ ಅನುಲ್ಲಂಘನೀಯ ಎಂಬುದನ್ನು ಗಾಂಧೀಯವರು ಒತ್ತಿ ಹೇಳುತ್ತಾರೆ. ತನ್ನ ಗಂಡನಿಗೂ "ಒಲ್ಲೆ" ಎಂದೆನ್ನುವ ಹಕ್ಕು ಆಕೆಗಿದೆ. "ಪ್ರತಿರೋಧದ ಪ್ರಾಥಮಿಕ ಹಕ್ಕಿನ ಅರಿವು ಮಹಿಳೆಗೆ ಇರಬೇಕೆಂದು ನನ್ನ ಹಂಬಲ. ತನಗದು ದೊರೆತಿಲ್ಲವೆಂದು ಈಗ ಆಕೆಗೆ ತಿಳಿದಿದೆ". ತನ್ನ ಸ್ವಂತ ಶರೀರದ ಮೇಲಿನ ಹಕ್ಕು ಮಹಿಳೆಗೆ ಇದ್ದೇ ಇದೆ. ಮದುವೆಯಿಂದಾಗಿ ಆಕೆ ಅದನ್ನು ಜೀವನ ಪರ್ಯಂತ ಬೇರೊಬ್ಬರಿಗೆ ಒಪ್ಪಿಸಬೇಕಾದ್ದಿಲ್ಲ. ಕಾಮರಹಿತ ಮಹಿಳೆಯೇ ಘನತೆವೆತ್ತ ಮಹಿಳೆ ಹಾಗೂ ಕೇವಲ ಸಂತಾನದ ಆಸೆಯಿಂದಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು ಮಾತ್ರ ನ್ಯಾಯಬದ್ಧ ಎಂಬ ವಿಚಾರದೊಂದಿಗೆ ಗಾಂಧೀಯವರ ಈ ದೃಷ್ಟಿಕೋನವೂ ಹೆಣೆದುಕೊಂಡಿದೆ.

ಹೆಣ್ಣು ತನ್ನ ಕಾಮುಕತನದಿಂದಾಗಿ ಮದುವೆಗೆ ಮೊದಲೇ ಲೈಂಗಿಕ ಸುಖಭೋಗ ಹಾಗೂ ದುರ್ವ್ಯವಹಾರಗಳಲ್ಲಿ ತೊಡಗಬಹುದೆಂಬ ಕಾರಣದಿಂದಾಗಿ ಅನೇಕರು ಆಕೆ ಮೈನೆರೆಯುವ ಮುನ್ನವೆ ನಡೆಯುತ್ತಿದ್ದ ವಿವಾಹಗಳನ್ನು ಸಮರ್ಥಿಸುತ್ತಿದ್ದರು. ಪಾವಿತ್ರ್ಯದ ಬಗೆಗಿನ ಈ ಗೀಳಿನ ಹೊರತಾಗಿಯೂ ಗಾಂಧೀಯವರು ಈ ಸಮರ್ಥನೆಗಳಿಗೆ ಪ್ರತಿಕ್ರಿಯೆಯಾಗಿ ಅಸಹನೆಯಿಂದ ಕಟಕಿಯಾಡಿದರು. ಸ್ತ್ರೀಯರ ಪರಿಶುದ್ಧತೆಯ ಬಗ್ಗೆ ಇಷ್ಟೊಂದು ಮಾರಕ ಆತಂಕ ಏಕಿದೆ? ಪುರುಷರ ಪರಿಶುದ್ಧತೆಯ ಬಗ್ಗೆ ಮಾತನಾಡಲು ಹೆಂಗಸರಿಗೆಲ್ಲಿದೆ ಅವಕಾಶ? ಸ್ತ್ರೀಯರ ಪರಿಶುದ್ಧತೆಯನ್ನು ನಿರ್ಣಯಿಸುವ ಅಧಿಕಾರವನ್ನು ಗಂಡಸರೇ ಏಕೆ ಅನ್ಯಾಯವಾಗಿ ತಮ್ಮ ಕೈಯಲ್ಲಿಟ್ಟುಕೊಳ್ಳಬೇಕು?"

ಗಾಂಧಿಯವರ ದೃಷ್ಟಿಯಲ್ಲಿ ಬಾಲವಿವಾಹ ಪದ್ಧತಿ ಭಾರತೀಯ ಸ್ತ್ರೀತ್ವಕ್ಕೆ ಕಳಂಕಪ್ರಾಯ, ಬಾಲವೈಧವ್ಯಕ್ಕೂ ಈ ಅನಿಷ್ಟಕ್ಕೂ ನಿಕಟ ಸಂಪರ್ಕವಿದೆ ಎಂಬುದನ್ನು ಅವರು ಗಮನಿಸಿದರು. "ಬರ್ಬರವಾದ ಆಚರಣೆಗೆ ಧಾರ್ಮಿಕ ಸಮ್ಮತಿ ನೀಡುವುದು ಧರ್ಮವಲ್ಲ : ಅಧರ್ಮ" ಇದನ್ನು ಅನುಮೋದಿಸಿ ಪ್ರೋತ್ಸಾಹಿಸುವ ಮೂಲಕ 'ದೇವರು ಮತ್ತು ಸ್ವರಾಜ್ಯದಿಂದ ನಾವು ದೂರ ಸಿಡಿಯುತ್ತಿದ್ದೇವೆ' ಹೀಗೆ ಅವರು ಮಹಿಳಾ ಶೋಷಣೆಯ ಸಮಸ್ಯೆಯನ್ನು ಸಾಮಾಜಿಕ ಹಾಗೂ ಸ್ವಾಸ್ಥದೊಂದಿಗೆ ತಳುಕು ಹಾಕಿದರು.●

ಅಮ್ಮ ಮಾತ್ರವೇ ಕೊಡುವ ಅನುವಂಶೀಯ ಬಳುವಳಿ

– ಡಾ. ಟಿ.ಎಸ್. ಚನ್ನೇಶ್

> ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯುತ್ತಿರುವ ಕೆಲವೇ ಲೇಖಕರಲ್ಲಿ ಪ್ರಮುಖರಾದವರು ಡಾ.ಟಿ.ಎಸ್.ಚನ್ನೇಶ್. ಮೂಲತಃ ಕೃಷಿ ವಿಜ್ಞಾನಿಯಾದ ಅವರು ತಮ್ಮ ವಿಜ್ಞಾನ ತಿಳುವಳಿಕೆಯನ್ನು ಕೃಷಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಇಡೀ ವಿಜ್ಞಾನ ಜಗತ್ತಿನ ಆಗು ಹೋಗುಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡಿರುವವರು. ವಿಜ್ಞಾನ ಕ್ಷೇತ್ರದ ತಾಜಾ ಮಾಹಿತಿಯನ್ನು ತಮ್ಮ ಅಂಕಣಗಳ ಮೂಲಕ ಕನ್ನಡ ಜನರಿಗೆ ಉಣಬಡಿಸುತ್ತಿರುವವರು.
>
> ಮಹಿಳೆಯರ ಸ್ಥಾನಮಾನದ ಬಗ್ಗೆ ಕೇವಲ ಸಾಮಾಜಿಕ ಮತ್ತು ಸಾಹಿತ್ಯ ಚಿಂತಕರು ಪ್ರತಿಕ್ರಿಯಿಸುತ್ತಿರುವಾಗ ವಿಜ್ಞಾನಿಯಾಗಿ ಜೀವ ವಿಜ್ಞಾನ ಕ್ಷೇತ್ರದಲ್ಲಿ ಹೆಣ್ಣಿನ ಸ್ಥಾನವನ್ನು ಕೌತುಕಪೂರ್ಣವಾಗಿ ಈ ಲೇಖನದಲ್ಲಿ ಡಾ. ಚನ್ನೇಶ್ ದಾಖಲಿಸಿದ್ದಾರೆ.

ಅನುವಂಶೀಯತೆ ಎಂಬುದು ಪೋಷಕರಿಂದ ಪಡೆದ ಬಳುವಳಿ ಎಂಬುದು ನಮ್ಮ ಸಹಜವಾದ ತಿಳಿವಳಿಕೆ. ಇದೇನು ಕೇವಲ ಅಮ್ಮನಿಂದ ಮಾತ್ರವೇ ಬರುವ ಅನುವಂಶೀಯತೆಯಲ್ಲಿ ಹೊಸತೇನು ಎನ್ನಿಸಬಹುದು. ಇದು ವಿಕಾಸದಲ್ಲಿ ಬಹಳ ಹಿಂದೆಯೆ ನಡೆದ ವಿಶೇಷವಾದ ಜೈವಿಕ ವಲಸೆಯ ಬಳುವಳಿ. ನಮ್ಮ ನಿಮ್ಮೆಲ್ಲರ ಸಹಜವಾದ ಅನುಭವವೆಂದರೆ ನಮ್ಮ ಸ್ನೇಹಿತರ ಅಥವಾ ಬಂಧುಗಳ ಮನೆಯಲ್ಲಿ ಹುಟ್ಟಿದ ಮಗುವನ್ನು ನೋಡಲು ಹೋಗಿ, ಮೊದಲು ಕಂಡಾಗ ಮಗುವಿನ ಅವಯವಗಳನ್ನು ಪೋಷಕರಿಗೆ ಹೋಲಿಸುತ್ತೇವೆ. ಕಣ್ಣುಗಳೋ ಎಲ್ಲಾ ಅಪ್ಪನಂತೆ ಎಂದು, ಮೂಗೆಲ್ಲಾ ಅವರ ಅಮ್ಮನದೆ ಅಂತಲೋ, ಅಷ್ಟೇಕೇ ಹುಬ್ಬುಗಳು ಥೇಟ್ ಅವರ ಅಜ್ಜನ ಹಾಗೆ ಎಂದೂ, ಅದು ಬಿಡಿ ತುಟಿಯಂತೂ ಅವರ ಅಜ್ಜಿಯದೇ, ಹೀಗೆ ಅವರ ಅಪ್ಪ ಅಮ್ಮನಿಂದ ಆರಂಭಿಸಿ ಅವರ ಅಮ್ಮ ಅಪ್ಪನ ತರೆಹೆವಾರಿ ಅವಯವಗಳ ಸಮೀಕರಿಸಿ ಮಗುವನ್ನು ವಿವ-ರಿಸುತ್ತೇವಲ್ಲವೆ? ಹೀಗೆ ನಾವೆಲ್ಲಾ ನಮ್ಮ ಅಮ್ಮ ಅಪ್ಪನ ಗುಣಗಳ ಬಳುವಳಿಯಾಗಿ ಅಥವಾ ಅವರ ಅಮ್ಮ ಅಪ್ಪನ ಗುಣಗಳ ಅಥವಾ ಇನ್ನೂ ಹಿಂದೆ ಹೋಗಿ ತಾತಾ ಮುತ್ತಾತಂದಿರ ಹೊತ್ತು ತಂದ ಗುಣಗಳನ್ನು ವೈಜ್ಞಾನಿಕವಾಗಿ ವಿವರಿಸಿದ ಅನುವಂಶೀಯತೆಯ ಕಥನಕ್ಕೆ ೧೮೬೬ರಲ್ಲಿ ಮೊಟ್ಟ ಮೊದಲ ಬಾರಿ ಗ್ರೆಗೊರ್ ಮೆಂಡಲ್ ಬಟಾಣಿಕಾಳುಗಳ ಗುಣಗಳ ಅಧ್ಯಯನದಿಂದ ನಾಂದಿ ಹಾಡಿದ್ದರು. ಓರ್ವ ಚರ್ಚಿನ ಪಾದ್ರಿಯಾಗಿ ಹತ್ತಾರು ಸಾವಿರ ಬಟಾಣಿ ಗಿಡಗಳನ್ನು ಕಾಳು ಕಟ್ಟಿಸುವ ಪ್ರಯೋಗ ನಡೆಸಿ ಅಮ್ಮ-ಅಪ್ಪ ನಮ್ಮ ಕೆಲವು ಗುಣಗಳನ್ನು ಸರಾಸರಿ ಹಂಚಿಕೊಟ್ಟಿರುತ್ತಾರೆ ಎಂದು ಆಗಿನ್ನೂ "ಜೀನು"ಗಳೆಂದು ಹೆಸರಿಸದೆ ಗೊತ್ತಿರದ ಬಳುವಳಿಗಳೆಂದು ಕರೆದಿದ್ದರು. ಅವುಗಳನ್ನು ನಿಭಾಯಿಸುವ ಡಿ.ಎನ್.ಎ. ಗಳ ಬಗೆಗೂ ತಿಳಿದಿರಲಿಲ್ಲ. ಈ ಡಿ.ಎನ್.ಎ.ಯು ಜೀವಿಕೋಶದಲ್ಲಿದ್ದು

ಅನುವಂಶೀಯತೆಯನ್ನು ಸಾಗಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ.

ಹೀಗೆ ಜೀವಿಯಿಂದ ಅದರ ಸಂತತಿಗೆ ಸಾಗುವ ಹಿನ್ನೆಲೆಯಲ್ಲಿ ಅಮ್ಮನದೇ ಆದ ವಿಶೇಷತೆಯೂ ಒಂದಿದೆ. ನಮ್ಮ ಅನುವಂಶೀಯತೆಯಲ್ಲಿ ಅಮ್ಮ-ಅಪ್ಪ ಇಬ್ಬರ ಪಾಲು ಇದ್ದರೂ, ಅಪ್ಪನದು ಇದ್ದರೂ ಇಲ್ಲವಾಗಿ ಅಮ್ಮ ಮಾತ್ರವೇ ಮಗುವಿನಲ್ಲಿ ಉಳಿದುಕೊಳ್ಳುವ ಸೋಜಿಗದ ಕಥೆಯಿದೆ.

ನಮ್ಮ ಜೀವಿಕೋಶದಲ್ಲಿ ಶಕ್ತಿಯನ್ನು ನಿಭಾಯಿಸುವ ಭಾಗವೊಂದಿದೆ. ಅದನ್ನು ಮೈಟೋಕಾಂಡ್ರಿಯಾ ಎನ್ನುತ್ತೇವೆ. ಒಂದು ರೀತಿಯಲ್ಲಿ ಇದು ಶಕ್ತಿ ಕೇಂದ್ರ! ಅದರೊಳಗೂ ಒಂದು ಭಿನ್ನವಾದ ಡಿಎನ್‌ಎ ಇರುತ್ತದೆ. ಇದು ಜೀವಿಕೋಶದ ಕೇಂದ್ರದಲ್ಲಿರುವ ಕೋಶಕೇಂದ್ರದ ಡಿ.ಎನ್.ಎ ಜೊತೆಗೆ ಅನುವಂಶಿಕವಾಗಿ ಮಕ್ಕಳಿಗೂ ಸಾಗಿ ಬರುತ್ತದೆ. ಈ ಮೈಟೋಕಾಂಡ್ರಿಯಾದ ಅಂದರೆ ಶಕ್ತಿ ಕೇಂದ್ರದ ಡಿ.ಎನ್.ಎ. ಸಂಪೂರ್ಣ ಅಮ್ಮನ ಬಳುವಳಿ. ಆದರೆ ನಮ್ಮ ಜೀವಕೋಶದ ಕೇಂದ್ರ ಡಿಎನ್‌ಎದಲ್ಲಿ ಅಪ್ಪ-ಅಮ್ಮನ ಸಮಪಾಲು ಸಾಗಿಬರುತ್ತದೆ. ಆದರೆ ಶಕ್ತಿ ಕೇಂದ್ರದ ಗುಣಗಳ ಬಳುವಳಿ ಮಾತ್ರ ಸಂಪೂರ್ಣವಾಗಿ ಅಮ್ಮನದೇ! ಆದ್ದರಿಂದ ನಮ್ಮೊಳಗಿರುವ ಮೈಟೋಕಾಂಡ್ರಿಯಾದ ಡಿ. ಎನ್.ಎ. ಮಾತ್ರ ನಮ್ಮ ಅಮ್ಮ ಅವರಮ್ಮನಿಂದ, ಅವರಮ್ಮ ಅವರಮ್ಮನಿಂದ ಹೀಗೆ ಅಮ್ಮಂದಿರಿಂದ ಸಾಗಿ ಬಂದ ಬಳುವಳಿ. ಹೆಣ್ಣಾಗಲಿ ಗಂಡಾಗಲಿ ಅವರೊಳಗಿನ ಮೈಟೊಕಾಂಡ್ರಿಯಾ ಹೆಣ್ಣಿನದು! ನಮ್ಮ ಅಮ್ಮ ನಿಜಕ್ಕೂ ನಮ್ಮ ಶಕ್ತಿ ಕೇಂದ್ರವೇ! ಶಕ್ತಿ ಕೇಂದ್ರವಾಗಿ ಒಟ್ಟಾರೆ ಆರೋಗ್ಯದ ಬಗೆಗೆ ನಿಭಾಯಿಸುವ ಗುಣಗಳ ನಿರ್ವಹಿಸುವ ಸಾಧ್ಯತೆಗಳಿವೆ. ಆದ್ದರಿಂದ ನಮ್ಮ ಮೆದುಳಿನ ಮತ್ತು ಇಂದ್ರಿಯಗಳ ಕ್ರಿಯೆಗಳಲ್ಲಿ ಮೈಟೊಕಾಂಡ್ರಿಯಾದ ಡಿ.ಎನ್.ಎ ಪಾತ್ರದ ಅರಿವಿನ ಅಧ್ಯಯನಗಳಿಗೆ ಮಹತ್ವ ಬಂದಿದೆ.

ಜೀವಿ ಸೃಷ್ಟಿಯ ಕ್ರಿಯೆಯಲ್ಲಿ ಅಪ್ಪ-ಅಮ್ಮನ ಒಟ್ಟಾರೆ ಪಾತ್ರವಿದ್ದರೂ, ಸಂತತಿಯಲ್ಲಿ ಪಾಲ್ಗೊಳ್ಳುವ ಅಪ್ಪನ ಜೀವಿಕೋಶವು ಸಹಜವಾಗಿ ಅದೂ ಮೈಟೋಕಾಂಡ್ರಿಯಾವನ್ನು ಹೊಂದಿದ್ದು, ಅದನ್ನೂ ಸಂತತಿಗೆ ವರ್ಗಾಯಿಸಿರುತ್ತದೆ. ಹಾಗಿದ್ದೂ ಅದು ಮಕ್ಕಳಲ್ಲಿ ಭಾಗವಾಗದ ಬಗೆಗೆ ಸೋಜಿಗದ ಸಂಗತಿಗಳಿವೆ. ಹೆಣ್ಣು ಭ್ರೂಣವನ್ನು ಹೊಕ್ಕ ಗಂಡಿನ ಜೀವಿಕೋಶದ ಭಾಗವಾದ ಮೈಟೋಕಾಂಡ್ರಿಯಾವು ಭ್ರೂಣದಲ್ಲಿ ಸೇರುವುದೇ ಇಲ್ಲ. ಹಾಗೇ ಕರಗಿ ಹೋಗುತ್ತದೆ. ಕೇವಲ ಅಮ್ಮನ ಭ್ರೂಣದಿಂದ ವರ್ಗಾಯಿಸಿದ ಮೈಟೊಕಾಂಡ್ರಿಯಾ ಮಾತ್ರವೇ ಸಂತತಿಯ ಭಾಗವಾಗುತ್ತದೆ. ಇದನ್ನು ನಿಸರ್ಗವು ಬಹುಷಃ ತುಂಬು ಜಾಣತನದಿಂದಲೇ ವಿಕಾಸಗೊಳಿಸಿಕೊಂಡಿದೆ. ಮೈಟೊಕಾಂಡ್ರಿಯಾವು ವಿಶೇಷವಾದ ಕೆಲಸವನ್ನು ನಿರ್ವಹಿಸುವ ಜೀವಿಕೋಶದ ಭಾಗ. ಈಗಾಗಲೆ ಹೇಳಿದಂತೆ ಅದು ಶಕ್ತಿ ಕೇಂದ್ರ. ನಮ್ಮ ಉಸಿರಾಟದಿಂದ ಪಡೆದುಕೊಂಡ ಆಮ್ಲಜನಕವನ್ನು ಶಕ್ತಿಗಾಗಿ ದೇಹಕ್ಕೆಲ್ಲಾ ಸಿಗುವಂತೆ ಮಾಡುವುದೇ ಈ ಮೈಟೊಕಾಂಡ್ರಿಯಾ.

ಮೈಟೊಕಾಂಡ್ರಿಯಾವು ನಮ್ಮ ಜೀವಿಕೋಶದ ಭಾಗವಾಗಿರುವುದೇ ಒಂದು ವಿಶೇಷ. ಏಕೆಂದರೆ, ನಮ್ಮ ಜೀವಿಕೋಶದಲ್ಲಿ ಕೋಶಕೇಂದ್ರವೂ ಡಿ.ಎನ್.ಎ. ಹೊಂದಿದ್ದು, ಈ ಮೈಟೊಕಾಂಡ್ರಿಯಾವೂ ಡಿ.ಎನ್.ಎ.ಯನ್ನು ಹೊಂದಿರುತ್ತದೆ. ಅಂದರೆ ಈ ಮೈಟೊಕಾಂಡ್ರಿಯಾವೂ ಒಂದು ಜೀವಿಕೋಶದಂತೆಯೇ! ಜೀವಿಕೋಶದೊಳಗೊಂದು ಜೀವಿಕೋಶವಿದ್ದಂತೆ! ಹೀಗೆ ಜೀವಿಕೋಶವನ್ನು ಮತ್ತೊಂದು ಜೀವಿಕೋಶವು ಹೊಕ್ಕರೆ ಅದನ್ನು ಸೋಂಕು ಎನ್ನುತ್ತೇವೆ. ನಮಗೆಲ್ಲಾ ಬ್ಯಾಕ್ಟೀರಿಯಾವೇ ಮುಂತಾದ ಸೂಕ್ಷ್ಮಾಣುಜೀವಿಗಳಿಂದ ಸೋಕು ತಗುಲಿ ಕಾಯಿಲೆಗೆ

ಒಳಗಾಗುವ ಪ್ರಕ್ರಿಯೆಯ ತರಹವೇ ಮೈಟೊಕಾಂಡ್ರಿಯಾವೂ ಕೂಡ ಪ್ರಾಣಿ ಹಾಗೂ ಸಸ್ಯ ಜೀವಿಕೋಶವನ್ನು ಸುಮಾರು ೨೦೦-೩೦೦ ಕೋಟಿ ವರ್ಷಗಳ ಹಿಂದೆಯೆ ಸೇರಿಕೊಂಡಿದೆ. ಇದು ಮತ್ತೊಂದು ಬ್ಯಾಕ್ಟೀರಿಯಾದಿಂದಲೆ ಬಂದಿರುವುದೆಂದು ಅಂದಾಜಿಸಲಾಗಿದೆ. ಆದರೆ ಇಲ್ಲಿನ ಸೋಂಕು ಯಾವುದೇ ಅನಾರೋಗ್ಯವನ್ನು ತರದೆ, ಇಡೀ ದೇಹವನ್ನು ನಿಭಾಯಿಸುವ ಶಕ್ತಿ ವ್ಯವಸ್ಥೆಯಾಗಿ ಜೀವಿಕೋಶದ ಭಾಗವಾಗಿದೆ. ಇಂತಹಾ ಮತ್ತೊಂದು ಜೀವಿಕೋಶವನ್ನು ಅನುಕೂಲವಾಗಿಸಿ ವರ್ಗಾಯಿಸುವ ಜವಾಬ್ದಾರಿಯನ್ನು ಅಮ್ಮನ ಅಥವಾ ಸ್ತ್ರೀ-ಜೀವಿಕೋಶವು ನಿಭಾಯಿಸುತ್ತಿದೆ.

ಇದೊಂದೇ ಅಲ್ಲಾ ಸಸ್ಯಗಳಲ್ಲಿರುವ ಹರಿದ್ರೇಣುಗಳು, ಅಂದರೆ ಹಸಿರಾಗಿರುವಂತೆ ಮಾಡುವ ಸಸ್ಯ ಜೀವಿಕೋಶದ ಭಾಗವೂ ಸಹಾ ಹೀಗೆ ತಾಯಿ ಕೋಶದ ಕೊಡುಗೆಯೇ! ಈ ಹರಿದ್ರೇಣುಗಳೂ ಸಹಾ ಸಂತತಿಯಿಂದ ಸಂತತಿಗೆ ವರ್ಗಾವಣೆಯಾಗುವುದು ಸಸ್ಯದ ಹೆಣ್ಣು ಭಾಗದ ಕೊಡುಗೆ. ಇಲ್ಲೂ ಸಹಾ ಗಂಡಿನಿಂದ ವರ್ಗಾಯಿಸಬಹುದಾದ ಹರಿದ್ರೇಣು ಸಂತತಿಯಲ್ಲಿ ದೇಹದ ಭಾಗವಾಗುವುದಿಲ್ಲ. ಈ ಹರಿದ್ರೇಣುವೂ ಸಹಾ ಮೈಟೊಕಾಂಡ್ರಿಯಾದಂತೆಯೇ ಬೇರೊಂದು ಜೀವಿಯಿಂದ ಸಸ್ಯಗಳೊಳಗೆ ವಲಸೆಯಾಗಿ ಬಂದದ್ದೇ! ವಿಶೇಷವೆಂದರೆ ಇವುಗಳೂ ಸಹಾ ಮೈಟೊಕಾಂಡ್ರಿಯಾದಂತೆಯೇ ಶಕ್ತಿಯ ಕುರಿತೇ ದುಡಿಯುತ್ತವೆ. ವ್ಯತ್ಯಾಸವೆಂದರೆ ಮೈಟೊಕಾಂಡ್ರಿಯಾವು ಆಯಾ ಜೀವಿಯಲ್ಲಿ ಶಕ್ತಿಯ ಪೂರೈಸುವುದಾದರೆ, ಹರಿದ್ರೇಣುಗಳು ನಮಗೆಲ್ಲಾ ತಿಳಿದಂತೆ ಶಕ್ತಿಯನ್ನು ಉತ್ಪತ್ತಿ ಮಾಡುವ ಕೆಲಸವನ್ನು ಮಾಡುತ್ತವೆ. ಸೂರ್ಯನಿಂದ ಶಕ್ತಿಯನ್ನು ಪಡೆದು ಇಂಗಾಲದ ಡೈ ಆಕ್ಸೈಡನ್ನು ನೀರಿನೊಂದಿಗೆ ಸಂಯೋಜಿಸಿ ಸಕ್ಕರೆ ಮತ್ತು ಆಮ್ಲಜನಕವನ್ನು ಉತ್ಪತ್ತಿ ಮಾಡುವುದೇ ಈ ಹರಿದ್ರೇಣುಗಳು. ಉಸಿರಾಟದಿಂದ ಹೀರಿಕೊಂಡ ಆಮ್ಲಜನಕದಿಂದ ಒಳಗಿನ ಶಕ್ತಿಯನ್ನು ಹಂಚುವ ಕೆಲಸವನ್ನು ಮೈಟೊಕಾಂಡ್ರಿಯಾ ಮಾಡುತ್ತದೆ.

ಎಂಥಹಾ ಸೋಜಿಗವಲ್ಲವೇ? ಶಕ್ತಿಯ ಉತ್ಪಾದನೆ ಮತ್ತು ಹಂಚಿಕೆಯಂತಹಾ ಎರಡನ್ನೂ ನಿಭಾಯಿಸುವ ಗುಣವು ಕೇವಲ ಅಮ್ಮನ-ಹೆಣ್ಣಿನ ಕೊಡುಗೆ! ವಿಕಾಸದ ಹಾದಿಯಲ್ಲಿ ಇವುಗಳ ಸಂಪೂರ್ಣ ವಿವರಗಳು ತುಂಬಾ ಸೈದ್ಧಾಂತಿಕ ಹಾಗೂ ಇನ್ನೂ ಆಸಕ್ತಿದಾಯಿಕ ಸಂಗತಿಗಳನ್ನು ಹುಟ್ಟು ಹಾಕಿವೆ. ಎಲ್ಲವನ್ನೂ ಜೀವಿ ಸಂಪೂರ್ಣ ತಿಳಿವಾಗಿ ಬಿಟ್ಟು ಕೊಟ್ಟಿಲ್ಲ. ನಮ್ಮ ನಿಮ್ಮೆಲ್ಲರ ಕುತೂಹಲಕ್ಕೆ, ಬೆರಗಿಗೆ ತನ್ನ ಮಡಿಲಲ್ಲಿ ಇಂತಹಾ ಸಹಸ್ರಾರು ಸಂಗತಿಗಳನ್ನಿಟ್ಟು ಪೋಷಿಸುತ್ತಿದೆ. ಜೀವಿಯ ಒಟ್ಟಾರೆ ಶಕ್ತಿಯ ನಿಭಾಯಿಸುವಿಕೆಯು ಹೆಣ್ಣಿನ ಕೊಡುಗೆ ಎಂಬುದಂತೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬಹು ದೊಡ್ಡ ಸೋಜಿಗವನ್ನು ತಂದಿಟ್ಟಿದೆ. ಇನ್ನೂ ನಮಗರಿಯದವು ಎಷ್ಟೆಷ್ಟಿವೆಯೋ? ಅಂತೂ "ಅಮ್ಮ-ತಾಯಿ-ಹೆಣ್ಣು" ಜೀವದ ನಿಜವಾದ ಶಕ್ತಿ ಕೇಂದ್ರವೇ! ●



ಬದುಕಿನಲ್ಲಿ ಬೀಸಿದ ಬಿರುಗಾಳಿಯನ್ನು ಎದುರಿಸಿ ನಿಂತು ಬದುಕಿ ಕಟ್ಟಿಕೊಂಡು 'ಸಾವಿಗಿಂತ ಬಾಳುಮೇಲು' ಎಂಬ ಕವಿವಾಣಿಯನ್ನು ಸಾರ್ಥಕಗೊಳಿಸಿದ ಇಬ್ಬರು ಸಾಮಾನ್ಯ ಮಹಿಳೆಯರ ಕತೆ ಇದು. ಪ್ರಪಂಚದಾದ್ಯಂತ ಅಧೈರ್ಯಗೆಡದೆ ತಮ್ಮ ಬದುಕೂ ಕಟ್ಟಿಕೊಂಡು ತಮ್ಮ ಸಂಸಾರವನ್ನೂ ದಡ ದಾಟಿಸಿದ ಲಕ್ಷಾಂತರ ಸಾಮಾನ್ಯ ಮಹಿಳೆಯರ ನೆನಪಿನಲ್ಲಿ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಈ ಬರಹ.

ಚಂದ್ರಾ ಸುಬ್ರಮಣ್ಯಂ

ಚಂದ್ರಾ ತನ್ನ ಹಳೆಯ 'ಟಿ ವಿ ಎಸ್ ೫೦' ರ ಮೇಲೆ ತರಕಾರಿಗಳ ಚೀಲಗಳನ್ನು ಹೇರಿ, ಗಾಡಿ ಚಾಲೂ ಮಾಡಿ ತನ್ನ ಹಳ್ಳಿ ಮೇಲುಕಾಡುವಿನಿಂದ ೧೫ ಕಿಮಿ ದೂರದ ಶಿವಗಂಗಿ ಮಾರುಕಟ್ಟೆಗೆ ಹೋಗುತ್ತಿದ್ದರೆ, ರಸ್ತೆ ಬದಿಯಲ್ಲಿ ನಿಂತ ಗಂಡಸರೆಲ್ಲಾ ಆಕೆಯನ್ನು ನೋಡಿ ಏನು ಹೆಣ್ಣಿದು ! ಎನ್ನುವವರೆ. ಆ ಪುಟ್ಟ ಗಾಡಿಯ ಮೇಲೆ ಅದು ಹೊರಲಾರದಷ್ಟು ಚೀಲಗಳನ್ನು ಹೇರಿ ನಮ್ಮ ಚಂದ್ರಾ ಗಾಡಿ ಓಡಿಸುತ್ತಿದ್ದರೆ ಆಕೆ ಯಾವ ಗಂಡಿಗೂ ಕಮ್ಮಿ ಇಲ್ಲ ಎಂದು ನಗುತ್ತಾಳೆ ಆಕೆಯ ತಾಯಿ ಚಿನ್ನಪೊಣ್ಣು .

ಆದರೆ ಚಿನ್ನಪೊಣ್ಣು ನಗುತ್ತಾ ತನ್ನ ಮಗಳ ಬಗ್ಗೆ ಅಭಿಮಾನದ ಮಾತನಾಡುವಾಗ ಮಗಳು ದಾಟಿ ಬಂದ ಕಷ್ಟದ ದಿನಗಳು ಅವಳ ನಗುವಿನಲ್ಲಿ ಇಣಕಿ ಹೋಗುತ್ತವೆ. ಚಂದ್ರಾ ತನ್ನ ಬದುಕಿನ ಕತೆಯನ್ನು ಹೀಗೆ ಪ್ರಾರಂಭಿಸುತ್ತಾಳೆ ' ನನಗೆ ಮದುವೆಯಾದಾಗ ೧೬ ವರ್ಷ. ನನ್ನ ಸಂಬಂಧಿ ಸುಬ್ರಮಣಿಯೊಂದಿಗೆ ಮದುವೆಯಾಗಿ ತಿರಪ್ಪೂರಿನಲ್ಲಿ ವಾಸಿಸತೊಡಗಿದೆ. ಆತ ಒಂದು ಗಾರ್ಮೆಂಟ್ ಕಂಪನಿಯಲ್ಲಿ ಹೊಲಿಗೆ ಕೆಲಸ ಮಾಡುತ್ತಿದ್ದ. ನನ್ನ ತಂದೆ ರಸ್ತೆ ಅಪಘಾತದಲ್ಲಿ ಸತ್ತು ಒಂದು ತಿಂಗಳಾಗಿತ್ತು ಅಷ್ಟೇ, ನನ್ನ ಗಂಡ ಅದೇಕೋ ಆತ್ಮಹತ್ಯೆ ಮಾಡಿಕೊಂಡ. ನನಗಾಗ ೨೪ ವರ್ಷ. ಆ ಹೊತ್ತಿಗೆ ನನ್ನ ಮಡಿಲಿನಲ್ಲಿ ಎರಡು ಮಕ್ಕಳು ಸೇರಿದ್ದವು. ನಾನು ದಿಕ್ಕು ತೋರದಾದೆ'

ಎರಡೂ ಮಕ್ಕಳನ್ನು ಕರೆದು ಕೊಂಡು ತನ್ನ ತೌರು ಮನೆಗೆ ಹೋಗಿ ತನ್ನ ವಿಧವೆ ತಾಯಿಯೊಂದಿಗೆ ಇರುವುದು ಬಿಟ್ಟು ಆಕೆಗೆ ಬೇರೆ ದಾರಿ ಇರಲಿಲ್ಲ. ತನ್ನ ಕತೆಯನ್ನು ಚಂದ್ರಾ ಹೀಗೆ ಮುಂದುವರೆಸುತ್ತಾಳೆ ' ಅಲ್ಲಿಗೆ ಬಂದ ಮೇಲೆ ನನಗಿದ್ದದ್ದು ಎರಡು ದಾರಿ. ಗಾರ್ಮೆಂಟ್ ಕಾರ್ಖಾನೆ ಸೇರುವುದು ಇಲ್ಲವೆ ಹೇಗಾದರು ಮಾಡಿ ಕಾಲೇಜಿಗೆ ಹೋಗಿ ಪದವಿ ಪಡೆದು ಕೆಲಸಕ್ಕೆ ಸೇರುವುದು. ಆದರೆ ಆ ಕೈ ಮಕ್ಕಳನ್ನು ಇಟ್ಟು ಕೊಂಡು ಈ ಎರಡೂ ದಾರಿಗಳು ನನಗೆ ಸಾಧ್ಯವಿರಲಿಲ್ಲ. ಆಗ ನಾನು ಮತ್ತು ನನ್ನ ತಾಯಿ ನಿರ್ಧರಿಸಿದ್ದು ನಮ್ಮ ಪಾಲಿಗೆ ಬಂದಿದ್ದ ೪ ಎಕರೆ ಭೂಮಿಯಲ್ಲಿ ತರಕಾರಿ, ಭತ್ತ ಮತ್ತು ಕಬ್ಬು ಬೆಳೆದು ಜೀವನ ನಡೆಸುವುದು'.

ಚಂದ್ರಾ ತನ್ನ ನಾಲ್ಕು ಎಕರೆ ಭೂಮಿಯ ಒಂದು ಭಾಗದಲ್ಲಿ ಕಬ್ಬು ಬೆಳೆದು ಅದರ ಆದಾಯವನ್ನು ತನ್ನ ಮಕ್ಕಳ ಶಾಲಾ ಶುಲ್ಕ, ಸಮವಸ್ತ್ರ ಮತ್ತು ಇತರ ದೊಡ್ಡ ಖರ್ಚುಗಳಿಗೆ

ಬಳಸುತ್ತಾಳೆ. ಭತ್ತ ಮತ್ತು ತರಕಾರಿಯಿಂದ ಬರುವ ಹಣವನ್ನು ಮನೆಯ ನಿರ್ವಹಣೆಗೆ ಬಳಸುತ್ತಾಳೆ. ಇದಕ್ಕಾಗಿ ಆಕೆ ಪ್ರತಿದಿನ ೧೬ ಗಂಟೆ ಆಕೆ ದುಡಿಯುತ್ತಾಳೆ. ಬೆಳಿಗ್ಗೆ ೪ ಗಂಟೆಗೆ ಎದ್ದು ಮಕ್ಕಳಿಗೆ ತಿಂಡಿ ಊಟ ಮಾಡಿ ಶಾಲೆಗೆ ತಯಾರಿ ಮಾಡಿ ತಾನೂ ದಿನದ ದುಡಿತಕ್ಕೆ ತಯಾರಾಗುತ್ತಾಳೆ. ತೋಟಕ್ಕೆ ಹೋಗಿ ತರಕಾರಿ ತಾಕಿನಲ್ಲಿ ಕೆಲಸ ಮಾಡುತ್ತಿರುವಾಗಲೇ ಮಕ್ಕಳನ್ನು ಶಾಲೆಗೆ ಬಿಟ್ಟು ಬರಬೇಕಾದ ಸಮಯ ಬರುತ್ತದೆ. ತೊಟ್ಟಿರುವ ನೈಟಿಯ ಮೇಲೆ ಸೀರೆ ಸುತ್ತಿಕೊಂಡು ಮಕ್ಕಳನ್ನು ಶಾಲೆಗೆ ಬಿಟ್ಟು ಬರಲು ಹೋಗುತ್ತಾಳೆ. ಹಿಂದಿರುಗಿ ಬಂದು ಮತ್ತೆ ತೋಟದಲ್ಲಿ ಕಾಲಿಟ್ಟರೆ ಊಟದ ಸಮಯಕ್ಕೆ ಮನೆಗೆ ಬರುವುದು. ಮಂಗಳವಾರ ಶಿವಗಂಗಿಯ ಸಂತೆಯ ದಿನದಂತೂ ಆಕೆಗೆ ಬಿಡುವೆ ಇಲ್ಲ. ತಾನು ಬೆಳೆದ ತರಕಾರಿಯ ಮೂಟೆಗಳನ್ನು ತನ್ನ ಮೊಪೆಡ್ ಮೇಲೆ ಹೇರಿ ಸಂತೆಗೆ ಹೊರಟರೆ ಎಲ್ಲರೂ ತಿರುತಿರುಗಿ ಆಕೆಯನ್ನು ನೋಡುತ್ತಾರೆ. ನಾನು ಸಣ್ಣವಳಿದ್ದಾಗ ಒಬ್ಬಂಟಿಯಾಗಿ ಎಲ್ಲಿಗೂ ಹೋದದ್ದೇ ಇಲ್ಲ ಇಂದು ದಿನಕ್ಕೆ ನಾಲ್ಕು ಸಲ ಮೊಪೆಡ್ ಹತ್ತಿ ಶಿವಗಂಗಿ ಹೋಗಿ ಬರುತ್ತೇನೆ ಎನ್ನುತ್ತಾಳೆ ಚಂದ್ರಾ. ಬೀಜ ತರಲು, ಗೊಬ್ಬರ ತರಲು, ಕ್ರಿಮಿನಾಶಕ ತರಲು ಆಕೆ ಶಿವಗಂಗಿಗೆ ಹೋಗಲೇ ಬೇಕು.

ಕೆಲವು ವಾರ ತರಕಾರಿ ಮಾರಾಟ ನಾಲ್ಕು ಸಾವಿರದಷ್ಟು ಆದರೆ ,ಕೆಲವು ವಾರ ಅದರ ಅರ್ಧವೂ ಆಗದು. ಗಂಟೆಗಟ್ಟಲೆ ಸಂತೆಯಲ್ಲಿ ಕುಳಿತು ಮಾರುವುದರಿಂದ ಸಗಟು ವ್ಯಾಪಾರಕ್ಕಿಂತ ಹೆಚ್ಚಿನ ಹಣ ದೊರೆಯುತ್ತದೆ ಎನ್ನುತ್ತಾಳೆ ಚಂದ್ರಾ.

ಸಂಜೆ ಮಕ್ಕಳು ಮನೆಗೆ ಬರುವಷ್ಟರಲ್ಲಿ ಮನೆಗೆ ಬಂದು ಬಿಡುವ ಚಂದ್ರಾ ಅವರೊಂದಿಗೆ ಆಡಿ, ಸ್ವಲ್ಪ ಸಮಯ ಟಿವಿ ನೋಡಿ, ಹೋ ವರ್ಕ ಮಾಡಿಸಿ ಒಟ್ಟಿಗೆ ಊಟ ಮಾಡುತ್ತಾಳೆ.

ಕಳೆದ ವರ್ಷ ಒಂದು ಚಿಕ್ಕ ಮನೆ ಕಟ್ಟಿರುವ ಚಂದ್ರಾಳಿಗೆ ಇನ್ನೂ ಶೌಚಾಲಯ ನಿರ್ಮಿಸಲು ಆಗಿಲ್ಲ. ಮಗಳು ಇನಿಯಾ ದೊಡ್ಡವಳಾಗುವುದರ ಒಳಗೆ ಶೌಚಾಲಯ ನಿರ್ಮಿಸಬೇಕು ಎನ್ನುವ ಚಂದ್ರಾ, ತನ್ನ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಬೇಕೆಂದು ಹತ್ತಿರದ ಖಾಸಗಿ ಶಾಲೆಯ ಇಂಗ್ಲೀಷ್ ಮಾಧ್ಯಮಕ್ಕೆ ತನ್ನ ಮಕ್ಕಳನ್ನು ಸೇರಿಸಿದ್ದಾಳೆ.●

ಮಂಜು ಸಿಂಗ್

ನಾನು ಹುಟ್ಟಿದ ಕೂಡಲೆ ನನ್ನನ್ನು ಕೊಲ್ಲಲು ನನ್ನ ಅಪ್ಪ ಪ್ರಯತ್ನಿಸಿದನಂತೆ. ಅಮ್ಮನಿಗೆ ಹೆರಿಗೆಯಾಗಿ ಹೆಣ್ಣು ಮಗು ಎಂದು ಗೊತ್ತಾದ ಕೂಡಲೆ ಹೆರಿಗೆ ಕೋಣೆಗೆ ನುಗ್ಗಿ ನನ್ನನ್ನು ಕಿತ್ತೊಯ್ದು ಎಲ್ಲೋ ಹೂತು ಹಾಕಲು ಒಳಗೆ ರಭಸದಿಂದ ನುಗ್ಗಿ ಬಂದನಂತೆ. ಅಷ್ಟರಲ್ಲಿ ನನ್ನ ಅಜ್ಜಿ ನನ್ನನ್ನು ಎತ್ತಿಕೊಂಡು ಓಡಿ ಹೋದಳಂತೆ. ಅವತ್ತು ನನ್ನ ಅಜ್ಜಿ ಆ ಕೆಲಸ ಮಾಡದಿದ್ದರೆ ಇಂದು ನಿಮ್ಮ ಮುಂದೆ ನಾನು ಇರುತ್ತಿರಲಿಲ್ಲ ಎನ್ನುತ್ತಾಳೆ ಮಂಜು ಸಿಂಗ್.

ಆಗತಾನೆ ೨೦೧೨ ರ ಜನಗಣತಿ ವರದಿ ಬಂದಿತ್ತು. ದೇಶದಲ್ಲಿ ಗಂಡು ಹೆಣ್ಣು ಅನುಪಾತದಲ್ಲಿ ಗಣನೀಯ ಏರುಪೇರು ಆಗಿರುವುದನ್ನು ವರದಿ ಗಮನಿಸಿತ್ತು. ನಾನು ಬದುಕಿ ಉಳಿದಿರುವುದೇ ಪವಾಡ. ನಾನು ಬೆಳೆಯುತ್ತಿರುವಾಗಲೂ ನನ್ನ ಅಪ್ಪ ನನ್ನನ್ನು ಕೊಂದು ಹಾಕಲು ಹಲವು ಬಾರಿ ಪ್ರಯತ್ನಿಸಿದ. ನನ್ನ ಅಮ್ಮ ನನ್ನನ್ನು ಅವನಿಂದ ರಕ್ಷಿಸುತ್ತಾ ಹೋದಳು. ತಲೆತಲಾಂತರದಿಂದ ಹ-ರಿಯಾನದ ಸಾದಿಕ್ ಪುರ್ ಎಂಬ ಹಳ್ಳಿಯ ಮಂಜುಸಿಂಗ್ ಮನೆಯಲ್ಲಿ ಹೆಣ್ಣು ಸಂತಾನ ಉಳಿದು ಬೆಳೆಯದಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗಿದೆ. ಮಂಜು ಅಜ್ಜ ತನ್ನ ಹೆಣ್ಣು ಮಗುವನ್ನು ಕೊಂದು ಹಾಕಿದ ರೀತಿಯನ್ನು ಮಂಜು ಅಪ್ಪ ಅವಳಿಗೆ ವಿವರಿಸಿ ಹೇಳಿದ್ದನಂತೆ. ಕೇವಲ ಹೆಣ್ಣು ಸಂತಾನ ಉಳಿಸಿಕೊಳ್ಳುವುದನ್ನು ಈ ಕುಟುಂಬದಲ್ಲಿ 'ಸಂಪ್ರದಾಯ'ವೆಂಬಂತೆ ಪಾಲಿಸಲಾಗುತ್ತಿದೆ.

ಕೇವಲ 'ಗಂಡು ಮಾತ್ರ' ನಿಯಮವನ್ನು ಕಠೋರವಾಗಿ ಅನುಸರಿಸಲಾಗುತ್ತಿದೆ. ಮಂಜುಸಿಂಗ್ ಕುಟುಂಬದ ಈ ಸಂಪ್ರದಾಯ ಕೇವಲ ಈ ಕುಟುಂಬದ್ದು ಮಾತ್ರ ಎಂದುಕೊಳ್ಳಬೇಡಿ. ದೇಶದ ಕೆಲವು ಭಾಗಗಳಲ್ಲಿ ದುದೃಷ್ಟವಶಾತ್ ಹೆಣ್ಣು ಶಿಶುವಿನ ಹತ್ಯೆ ಎಂಬುದು ಸಂಸ್ಕೃತಿ ಮತ್ತು ಅರ್ಥವ್ಯವಸ್ಥೆಯ ನಂಟಿನಿಂದ ಆಗಿದೆ. ಈ ಪದ್ಧತಿ ಭಾರತದಲ್ಲಿ ಶತಮಾನಗಳಿಂದ ರೂಢಿಯಲ್ಲಿದೆ. ಹೆಣ್ಣು ಶಿಶುವನ್ನು ಅಂತ್ಯಗೊಳಿಸುವ ರೀತಿ ಪ್ರದೇಶದಿಂದ ಪ್ರದೇಶಕಕ್ಕೆ ಬೇರೆಬೇರೆ ರೀತಿ ಇದ್ದರು ಎಲ್ಲವೂ ಅಷ್ಟೇ ಭಯಂಕರವಾಗಿವೆ. ಶಿಶುವಿಗೆ ಹೊಟ್ಟು ತಿನ್ನಿಸುವುದು, ಬಾಯಿಗೆ ತೌಡು ತುಂಬಿ ಉಸಿರುಗಟ್ಟಿಸುವುದು, ಹೆಚ್ಚಿನ ಪ್ರಮಾಣದಲ್ಲಿ ತಂಬಾಕಿನ ನೀರು ಕುಡಿಸುವುದು, ಕತ್ತು ಹಿಸುಕಿ ಸಾಯಿಸುವುದು , ಉಪವಾಸ ಕೆಡವುದು, ಜೀವಂತವಾಗಿ ಹೂತುಬಿಡುವುದು, ಹೀಗೆ ಒಂದೇ ಎರಡೇ ?

ಈ ಪದ್ಧತಿಗಳು ನಿಧಾನವಾಗಿ ಕಣ್ಮರೆಯಾಗುತ್ತಿದ್ದರೂ ಇತ್ತಿಚಿಗೆ ಹೆಣ್ಣುಶಿಶು ಹತ್ಯೆಯ ೧೨೦ ಪ್ರಸಂಗಗಳು ರಾಷ್ಟ್ರೀಯ ಅಪರಾಧ ದಾಖಲೆಗಳಲ್ಲಿ ಕಂಡಿದೆ. ಹೆಣ್ಣು ಭ್ರೂಣಹತ್ಯೆ ನಿಷೇಧ ಕಾನೂನು ೧೯೭೦ರಲ್ಲಿ ಜಾರಿಗೆ ಬಂದಾಗಿನಿಂದ ಹೆಣ್ಣುಭ್ರೂಣ/ಶಿಶು ಹತ್ಯೆಯ ರೂಪಗಳು ಇನ್ನೂ ಗುಟ್ಟಾಗಿ, ಕೊಲೆಯ ಚಹರೆಗಳು ಸಿಗದಂತಹ ಉಪಾಯಗಳಿಗೆ ದಾರಿ ಮಾಡಿಕೊಟ್ಟಿದೆ.

೧೯೮೦ ರಲ್ಲಿ ಹೊಸದಾಗಿ ಲಿಂಗ ಪತ್ತೆಯನ್ನು ಮಾಡಬಹುದಾದ ಅಲ್ಟ್ರಾಸೌಂಡ್ ತಂತ್ರಜಾನ ಬಂದಿತು. ಇದು ಶಿಶು ಹತ್ಯೆಯ ಹಳೆಯ ಪದ್ಧತಿಗಳು ಅಳಿಸಿ ಹೋಗಿ, ಹೊಸ ಪದ್ಧತಿಗಳು ಬರಲು ಸಹಾಯಮಾಡಿತು. ದೇಶದೆಲ್ಲೆಡೆ ಅಣಬೆಯಂತೆ ಹುಟ್ಟಿಕೊಂಡ ಲಿಂಗಪತ್ತೆಯ ಈ ತಂತ್ರಜ್ಞಾನ ಹೆಣ್ಣು ಶಿಶುಹತ್ಯೆಯನ್ನು ಕಡಿಮೆ ಮಾಡಿ ಗರ್ಭದ ಹಂತದಲ್ಲೇ ಹೆಣ್ಣನ್ನು ಮುಗಿಸಿಬಿಡಲು ಅವಕಾಶ ಮಾಡಿಕೊಟ್ಟಿತು. ಇದನ್ನರಿತ ಸರ್ಕಾರ ೧೯೯೪ರಲ್ಲಿ ಲಿಂಗಪತ್ತೆ ನಿಷೇಧ ಕಾನೂನನ್ನು ಜಾರಿಗೊಳಿಸಿ ಅದಕ್ಕೆ ೨೦೦೩ ತಿದ್ದುಪಡಿ ತಂದು ಕಾನೂನನ್ನು ಕಠಿಣಗೊಳಿಸಿದ್ದರೂ ಗಂಡು ಹೆಣ್ಣಿನ ಅನುಪಾತದಲ್ಲಿ ಸಮಾನತೆ ಬಂದಿಲ್ಲ. ಬದಲಿಗೆ ದಶಕದಿಂದ ದಶಕಕ್ಕೆ ಅನುಪಾತದಲ್ಲಿ ಹೆಚ್ಚಳವೇ ಆಗುತ್ತಿದೆ. ಈ ಎಲ್ಲಾ ಕತೆಯನ್ನು ಮೂವತ್ತೈದು ವರ್ಷದ ಮಂಜು ಹರಿಯಾನದ ಕೊರೆಯುವ ಚಳಿಯಲ್ಲಿ ಬೆಳಿಗ್ಗೆ ಅವಳ ಮನೆಯಲ್ಲಿ ಸೌದೆ ಒಲೆಯಲ್ಲಿ ಚಪಾತಿ ಮಾಡುತ್ತಾ ನನಗೆ ಹೇಳುತ್ತಿದ್ದಾಳೆ.

ರಾಜಸ್ಥಾನದಲ್ಲಿ ಜನಪ್ರಿಯ ಹಾಡೊಂದು ಮಗಳಿಗೆ ನೀನು ಮತ್ತೆ ಬರಬೇಡ ಎನ್ನುತ್ತದೆ. ಈ ಹಾಡನ್ನು ಹೆಣ್ಣು ಶಿಶುಹತ್ಯೆಯ ಸಂದರ್ಭದಲ್ಲಿ ಹಾಡುತ್ತಿದ್ದರಂತೆ. ಪಂಜಾಬ್‌ನಲ್ಲಿ ಒಂದು ಮಡಕೆಯಲ್ಲಿ ಬೆಲ್ಲ, ಕಾಳು ಮತ್ತು ಒಂದಿಷ್ಟು ಉದ್ದದ ದಾರ ಹಾಕಿ ಅದರಲ್ಲಿ ಹೆಣ್ಣು ಶಿಶುವನ್ನು ಇಟ್ಟು ಹೂಳುತ್ತಿದ್ದರಂತೆ. ಹೂಳುವಾಗ ಬೆಲ್ಲಾ ತಿನ್ನತ್ತಾ, ಕಾಳು ತಿನ್ನುತ್ತಾ ದಾರ ಹೊಸೆಯುತ್ತಾ ಹೊರಟು ಹೋಗು ಮುಂದೆ ನಿನ್ನ ಬದಲಿಗೆ ನಿನ್ನ ಸಹೋದರನನ್ನು ಕಳುಹಿಸು ಎಂದು ಹಾಡುತ್ತಿದ್ದರಂತೆ.

ಮಂಜು ಹೇಳುವಂತೆ ಬೆಲ್ಲ ಮತ್ತು ಕಾಳು ಗಂಡು ಮಗುವಿನ ಜನನದ ಸಂದರ್ಭದಲ್ಲಿ ಹಂಚುವ ಸಿಹಿಯ ಸಂಕೇತವಾದರೆ, ದಾರ ಹೆಣ್ಣು ಮಕ್ಕಳು ಸಹೋದರರಲ್ಲಿ ರಕ್ಷಣೆ ಕೋರಿ ಕಟ್ಟುವ ರಾಖಿಯ ಸಂಕೇತ.

ಮಂಜುಸಿಂಗ್ ಸ್ವಯಂಸೇವಾ ಸಂಸ್ಥೆಯೊಂದರಲ್ಲಿ ಆರೋಗ್ಯ ಮತ್ತು ಲಿಂಗ ಸಮಾನತೆಯ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾಳೆ. ಈ ಎಲ್ಲ ಕತೆ ಹೇಳುವಾಗ ಮಂಜು ತನ್ನ ಮನೆಯ ಕೆಲಸವನ್ನೆಲ್ಲಾ ಮುಗಿಸಿ ಕೆಲಸಕ್ಕೆ ಹೋಗಲು ತಯಾರಾದಳು. ನಾನೂ ಆಕೆಯೊಂದಿಗೆ ಹಳ್ಳಿಯ ಹೆಣ್ಣು ಮಕ್ಕಳ ಸಭೆಗೆ ಹೊರಟೆ.

ನಾವು ಆ ಹಳ್ಳಿ ತಲುಪುವದರಲ್ಲಿ ಆಗಲೇ ಒಂದಿಷ್ಟು ಹೆಣ್ಣು ಮಕ್ಕಳು ಒಂದೆಡೆ ಸೇರಿದ್ದರು. ತನ್ನ ತಂದೆ ತನ್ನನ್ನು ಕೊಲ್ಲಲು ಹವಣಿಸಿದ ಕತೆಯನ್ನು ಹಳ್ಳಿಗರಿಗೆ ಹೇಳುತ್ತಾ ಆರೋಗ್ಯ ಮತ್ತು ಲಿಂಗ ಸಮಾನತೆಯ ವಿಚಾರಕ್ಕೆ ಮಂಜು ಬಂದಳು. ಚರ್ಚೆ ಮುಂದುವರೆಯುತ್ತಾ ಹೋಯಿತು, ಬಿಸಿ ಏರುತ್ತಾ

ಹೋಯಿತು. ಕೆಲವು ಹೆಣ್ಣು ಮಕ್ಕಳು ತಾವು ಏಕೆ ಗಂಡುಮಗುವನ್ನು ಇಚ್ಛಿಸುತ್ತೇವೆ ಎಂಬುದನ್ನು ಹೇಳತೊಡಗಿದರು. ಹೆಣ್ಣು ಮಗವನ್ನು ಸಾಕುವುದು ದುಬಾರಿ, ವರದಕ್ಷಿಣೆ ಕೊಡಬೇಕು ಎಂಬುದು ಒಂದಾದರೆ, ಮಗಳು ಮದುವೆಯಾಗಿ ಹೊರಟುಹೋಗುತ್ತಾಳೆ ಮಗನಾದರೋ ನಮ್ಮೊಂದಿಗಿದ್ದು ನಮ್ಮನ್ನು ನೋಡಿ ಕೊಳ್ಳುತ್ತಾನೆ ಎಂಬುದು ಮತ್ತೊಂದು. ಮತ್ತೂ ಮುಂದುವರೆದು ಮಗಳನ್ನು ಆರೈಕೆ ಮಾಡುವುದೆಂದರೆ ಪಕ್ಕ ಮನೆಯ ಗಿಡಕ್ಕೆ ನೀರು ಎರೆದಂತೆ ! ಎಂದರು ಕೆಲವರು. ಅಷ್ಟರಲ್ಲಿ ಆ ಮೂಲೆಯಲ್ಲಿ ಕುಳಿತಿದ್ದ ಮುದುಕಿಯೊಬ್ಬಳು ಎತ್ತರದ ಗಡಸು ದನಿಯಲ್ಲಿ 'ನೀವೆಲ್ಲರೂ ಗಂಡು ಗಂಡು ಎನ್ನುತ್ತಿದ್ದೀರಿ. ಮಕ್ಕಳನ್ನು ಹೆರುವವರು ಯಾರು ? ಕೇಳಿ ನಮಗೆ ಹೆಣ್ಣು ಮಕ್ಕಳೂ ಬೇಕು, ಹೆಣ್ಣು ಮಕ್ಕಳು ವಿಶೇಷದವರು, ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದಳು.

ಆದರೆ ವಾಸ್ತವವೇ ಬೇರೆ. ೨೦೧೧ ರ ಜನಗಣತಿಯ ಪ್ರಕಾರ ಹರಿಯಾನದಲ್ಲಿ ೦-೬ ವರ್ಷದ ಪ್ರಾಯದ ಗುಂಪಿನಲ್ಲಿ ೧೦೦೦ ಗಂಡಿಗೆ ೮೩೪ ಹೆಣ್ಣು ಇದೆ. ರಾಜ್ಯದಲ್ಲಿ ವಯಸ್ಕ ಗಂಡು ಮಕ್ಕಳಿಗೆ ಮದುವೆಗೆ ಹೆಣ್ಣು ಸಿಗುತ್ತಿಲ್ಲ. ಇಡೀ ಹರಿಯಾನ ರಾಜ್ಯದ ಹಳ್ಳಿಗಳು ಹೆಣ್ಣು ಮಕ್ಕಲ ಕೊರತೆಯನ್ನು ಅನುಭವಿಸುತ್ತಿದೆ. ಗಂಡುಗಳ ಹೆಣ್ಣು ಪಡೆಯಲು ದೇವರಲ್ಲಿ ಹರಕೆ ಸಲ್ಲಸುತ್ತಿದ್ದಾರೆ. ಹಣದ ಆಮಿಷ ತೋರಿ ಪರರಾಜ್ಯಗಳಿಂದ ಹೆಣ್ಣು ಮಕ್ಕಳನ್ನು ತರುತ್ತಿದ್ದಾರೆ. ಕಡೆಗೆ ಓಟು ಕೇಳಲು ಬರುವ ರಾಜಕಾರಣಿಗಳಿಗೆ ಹೆಣ್ಣು ಹುಡುಕಿ ಕೊಟ್ಟರೆ ಮಾತ್ರ ಓಟು ಕೊಡುವುದಾಗಿ ಹೇಳುತ್ತಿದ್ದಾರೆ. !

ಮಂಜು ಮುಂದುವರೆದು ನನಗೆ ಮದುವೆಯಾದ ಮೇಲೆ, ಲಿಂಗ ಪರೀಕ್ಷೆ ಮಾಡಿಸಿ ಗರ್ಭಪಾತ ಮಾಡಿಸುವ ವಿಷಯ ಗೊತ್ತಾಯಿತು. ಇದು ಹಳ್ಳಿಯ ಎಲ್ಲ ಮನೆಯಲ್ಲೂ ಇದು ಸಾಮಾನ್ಯ ಸಂಗತಿಯಾಗಿತ್ತು. ಗರ್ಭವತಿಯಾದ ಹೆಣ್ಣು ಮಕ್ಕಳ ಮೇಲೆ ಗರ್ಭಪಾತಕ್ಕಾಗಿ ಎಲ್ಲಿಲ್ಲದ ಒತ್ತಡ ಹೇರಲಾಗುತ್ತಿತ್ತು. ಗಂಡು ಸಂತನಾಕ್ಕಾಗಿ ಒಂದಲ್ಲ, ಎರಡಲ್ಲ ಹತ್ತು ಬಾರಿ ಗರ್ಭಪಾತ ಮಾಡಿಸಿಕೊಂಡು ಹೆಂಗಸರು ನನಗೆ ಗೊತ್ತಿದ್ದಾರೆ. ಎನ್ನತ್ತಾಳೆ. ಈ ಹೆಣ್ಣು ಮಕ್ಕಳ ಹಿತಕ್ಕಾಗಿ ನಾನೂ ಏನಾದರೂ ಮಾಡಬೇಕೆಂದು ನನಗೆ ತೀವ್ರವಾಗಿ ಅನಿಸತೊಡಗಿತು. ಹಾಗಾಗಿ ಈ ಕೆಲಸವನ್ನು ನಾನು ಆಯ್ದು ಕೊಂಡೆ ಎನ್ನುತ್ತಾರೆ ಮಂಜು.

ಹೆಚ್ಚಿನ ಔಷಧಿಯೂ ವಿಷವಾಗುತ್ತದೆ. ಗರ್ಭವತಿಯರು ಗರ್ಭದಲ್ಲಿರುವ ಜೀವದ ಆರೋಗ್ಯ ರಕ್ಷಣೆಗೆ ಬಂದ ಅಲ್ಟ್ರಾಸೌಂಡ್ ಲಿಂಗ ಪತ್ತೆ ಹಚ್ಚುವ ತಂತ್ರಜ್ಞಾನವು ಮೂಲ ಉದ್ದೇಶಕ್ಕೇ ಶಾಪವಾಗಿ ಪರಿಣಮಿಸಿ ಹೆಣ್ಣು ಭ್ರೂಣ ಹತ್ಯೆಗೆ ಉಪಯೋಗಕ್ಕೆ ಬಂದದ್ದು ವಿಪರ್ಯಾಸವೇ ಸರಿ. ಇದರಿಂದ ಹೆಣ್ಣನ್ನು ಕೊಲ್ಲುವ ವಿಧಾನ ಸುಲಭವಾಗಿ ಹೋಯಿತು ಎನ್ನುತ್ತಾರೆ ಮಂಜು. ●

ಸಾಭಾರಾ: ಪರಿ, ಮೂಲ : ಅಪರ್ಣಾ ಕಾರ್ತಿಕೇಯನ್ ಮತ್ತು ಸ್ವಾತಿ ಚಕ್ರವರ್ತಿ
ಅನುವಾದ : ಸುಗಿತನಯ

ಆಕ್ಯುಪೇಷನಲ್ ಥೆರಪಿಯ ಹರಿಕಾರ್ತಿ : ಕಮಲಾಬಾಯಿ ನಿಂಬಕರ್

– ಸಹನಾ ಹೆಗಡೆ

ಕಮಲಾಬಾಯಿ ನಿಂಬಕರ್ ಹುಟ್ಟಿನಿಂದ ಅಮೇರಿಕಾದವರು. ಬದುಕಿದ್ದು ಭಾರತದಲ್ಲಿ. ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ 'ಆಕ್ಯುಪೇಶನಲ್ ಥೆರಪಿ' ಎಂಬ ಹೊಸ ಶಾಖೆಯೊಂದು ತೆರೆದುಕೊಳ್ಳುವಂತೆ ಮಾಡಿ ವೈದ್ಯಕೀಯ ಕ್ಷೇತ್ರಕ್ಕೊಂದು ಹೊಸ ಆಯಾಮ ನೀಡಿದವರು. ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಈ ಸಾಧಕ ಮಹಿಳೆಯನ್ನು ಸಹನಾ ಹೆಗಡೆ ಇಲ್ಲಿ ಪರಿಚಯಿಸಿದ್ದಾರೆ.

ದೈಹಿಕ ಮತ್ತು ಮಾನಸಿಕ ವಿಕಲತೆಯಿರುವ ವ್ಯಕ್ತಿಯು ಅಗತ್ಯ ಮತ್ತು ಉಪಯುಕ್ತ ಕೆಲಸಗಳನ್ನು ಮಾಡುತ್ತಾ ತನ್ನ ಸಮಸ್ಯೆಯಿಂದ ಹೊರಬರುವಂತೆ ಮಾಡುವ ಚಿಕಿತ್ಸಾ ವಿಧಾನ ಆಕ್ಯುಪೇಶನಲ್ ಥೆರಪಿ. ಇಂಜಿನಿಯರಿಂಗ್, ವೈದ್ಯಕೀಯ, ಮ್ಯಾನೇಜ್‌ಮೆಂಟ್ ಮುಂತಾದ ಜನಪ್ರಿಯ ವಿಷಯಗಳ ತರಬೇತಿಯ ನಡುವೆ, ನಿಧಾನವಾಗಿಯಾದರೂ, ನಿಜಕ್ಕೂ ರೋಗಿ ಪರವಾದ 'ಆಕ್ಯುಪೇಶನಲ್ ಥೆರಪಿ' ಎಂಬ ವಿಷಯ ಶಿಕ್ಷಣ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತಿದೆ.

ಇಂತಹ ಶ್ರೇಷ್ಠ ವಿಚಾರ, ಪುನರ್ವಸತಿ ಪರಿಯೋಜನೆಗಳು, ಶೈಕ್ಷಣಿಕ ಸೌಲಭ್ಯಗಳು ಭಾರತದಲ್ಲಿ ನೆಲೆಗೊಳ್ಳಲು ಕಾರಣರಾದವರು ಎಲಿಜಬೆತ್ ಲಂಡಿ ಎಂಬ ಅಮೆರಿಕನ್ ಮಹಿಳೆ. ಇವರು ೧೯೦೫ ರ ಜನವರಿ ೫ರಂದು ನ್ಯೂಜೆರ್ಸಿಯ ಮೌಂಟ್ ಹಾಲ್ಲಿಯಲ್ಲಿ ಜನಿಸಿದರು. ತಾಯಿ – ಬೆಸ್ಸಿ ಮೊರಿಸ್, ತಂದೆ– ಜೋಸೆಫ್ ವಿಲ್ಮರ್ ಲಂಡಿ. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದಲ್ಲಿ ಪದವಿ ಪಡೆಯುತ್ತಿದ್ದಾಗಲೇ ಎಂಜಿನಿಯರಿಂಗ್ ಓದುತ್ತಿದ್ದ ವಿಷ್ಣು ನಿಂಬಕರ್ ಪರಿಚಿತರಾಗಿ ಮುಂದೆ ಅವರು ಪತಿ ಪತ್ನಿಯರಾದರು. ನಿಂಬಕರ್ ಅವರ ಮೂಲಕ ಬ್ರಿಟಿಶ್ ಸಾಮ್ರಾಜ್ಯದ ವಸಾಹತುವಾಗಿ ಭಾರತ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳಿಗೆ ಕಾರಣಗಳನ್ನು ತಿಳಿದುಕೊಂಡರು. ೧೯೩೦ ರಲ್ಲಿ ಭಾರತಕ್ಕೆ ಬಂದ ಎಲಿಜಿಬತ್ ಕೆಲಕಾಲ ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿದ್ದು ನಂತರ ದೇಶದುದ್ದಗಲಕ್ಕೂ ಸಂಚರಿಸಿದರು.

ವಿಷ್ಣು ನಿಂಬಕರ್ ಅವರೊಂದಿಗೆ ಮದುವೆಯಾದ ಮೇಲೆ ಎಲಿಜಬೆತ್ ಲಂಡಿ ಕಮಲಾಬಾಯಿ ನಿಂಬಕರ್ ಆದರು. ಸಮಾಜಮುಖಿಯಾದ ಕಮಲಾಬಾಯಿ ಸ್ವಇಚ್ಛೆಯಿಂದ ಬಂದ ದೇಶಕ್ಕೆ ಸೂಕ್ತ ಕೊಡುಗೆ ನೀಡಲು ಕಾರ್ಯಕ್ಷೇತ್ರವನ್ನು ಹುಡುಕತೊಡಗಿದರು. ಹೊಸ ಜಾಗ, ಸಂಸ್ಕೃತಿ, ಭಾಷೆಯ ಸವಾಲುಗಳನ್ನು ಎದುರಿಸುತ್ತಾ ತನ್ನ ಬದುಕನ್ನು ಈ ದೇಶದಲ್ಲಿ ರೂಪಿಸಿಕೊಳ್ಳಲು ಬೇಗಲೇ ಕಲಿತರು. ಕೆಲಕಾಲ ಜಲಂಧರ್‌ನಲ್ಲಿ ಆರ್ಯಸಮಾಜದ ಕನ್ಯಾ ಮಹಾವಿದ್ಯಾಲಯದಲ್ಲಿ ಇಂಗ್ಲೀಷ್ ಮತ್ತು ಅರ್ಥಶಾಸ್ತ್ರವನ್ನು ಬೋಧಿಸಿದರು. ಪ್ರಾಥಮಿಕ, ಪೂರ್ವಪ್ರಾಥಮಿಕ ಶಿಕ್ಷಣವು ಬಹುತೇಕ ಅಸ್ತಿತ್ವದಲ್ಲಿಯೇ ಇಲ್ಲವೆನ್ನುವಂತಹ ಭಾರತದ ಪರಿಸ್ಥಿತಿಯಲ್ಲಿ ಸಿ.ಎಫ್.ಆಂಡ್ರ್ಯೂಸ್ ಅವರ ಸಲಹೆಯಂತೆ ಇಂಗ್ಲೆಂಡಿಗೆ ತೆರಳಿ ಫ್ರೇಬಲ್ ಬೋಧನಾ ಪದ್ಧತಿಯನ್ನು ಕಲಿತು ಬಂದರು. ವಿಷ್ಣು ಅವರೊಂದಿಗೆ ಮುಂಬೈನಲ್ಲಿ ನೆಲಸಿದ ಕಮಲಾದೇವಿ 'ದ ನ್ಯೂ ಖಾರ್ ಸ್ಕೂಲ್' ಹೆಸರಿನಲ್ಲಿ ಪ್ರಾರಂಭಿಸಿದ ಪೂರ್ವ ಪ್ರಾಥಮಿಕ ಶಾಲೆಯು ನಂತರ ಬಹುದೊಡ್ಡ ಶಿಕ್ಷಣ ಸಂಸ್ಥೆಯಾಗಿ ಬೆಳೆಯಿತು.

ಅಮೆರಿಕದ ಆಕ್ಯುಪೇಷನಲ್ ಥೆರಪಿಸ್ಟ್ ಹೆಲೆನ್ ವಿಲ್ಲಾರ್ಡ್ರ್ ಅವರ ಲೇಖನವೊಂದರಿಂದ ಪ್ರಭಾವಿತರಾದ ಕಮಲಾಬಾಯಿಯವರಿಗೆ ಭಾರತದಲ್ಲಿ ಈ ವೃತ್ತಿಗಿರುವ ಮೌಲ್ಯ, ಉಪಯುಕ್ತತೆಯು ಮನದಟ್ಟಾಯಿತು. ಮೊದಲನೇ ವಿಶ್ವಯುದ್ಧದ ಸಮಯದಲ್ಲಿ ಜನ್ಮ ತಳೆದ ಈ ವೃತ್ತಿ ಎರಡನೇ ವಿಶ್ವಯುದ್ಧದ ಸಮಯದಲ್ಲಿ ಹಲವಾರು ಅಂಗವೈಕಲ್ಯಗಳಿಗೆ ಚಿಕಿತ್ಸಾ ರೂಪದಲ್ಲಿ ಶಾಶ್ವತ ಪರಿಹಾರ ನೀಡಿತ್ತು.

ಬಹುತೇಕ ಸ್ವಾಸ್ಥ್ಯ ಸೌಲಭ್ಯಗಳು ಐರೋಪ್ಯರಿಗೆ ಮಾತ್ರ ಲಭ್ಯವಿದ್ದ ಎರಡನೇ ವಿಶ್ವಯುದ್ಧದ ಪರಿಸ್ಥಿತಿಯನ್ನೂ ಭಾರತೀಯರಿಗೆ ಈ ಚಿಕಿತ್ಸೆಗಳನ್ನು ನೀಡಲು ಬ್ರಿಟಿಷರು ತಾರತಮ್ಯವನ್ನು ಕಮಲಾದೇವಿ ಆಳವಾಗಿ ಅಭ್ಯಸಿಸಿದರು. ೧೯೪೫ ರಲ್ಲಿ ಎರಡನೇ ಮಹಾಯುದ್ಧ ಮುಗಿದ ನಂತರ ಅಮೇರಿಕೆಗೆ ತೆರಳಿ ಫಿಲಿಡೆಲ್ಫಿಯಾ ಸ್ಕೂಲ್ ಆಫ್ ಆಕ್ಯುಪೇಷನಲ್ ಥೆರಪಿಯನ್ನು ಸೇರಿದರು. ಈ ತರಬೇತಿಯ ಸಂದರ್ಭದಲ್ಲಿ ಬಾಲ್ಯದಲ್ಲಿ ತಾಯಿಯಿಂದ ಕಲಿತದ್ದ ಹೊಲಿಗೆ, ಕಸೂತಿ, ಕರಕುಶಲ ಕೆಲಸಗಳು ಅವರಿಗೆ ಹೆಚ್ಚಿನ ಉಪಯೋಗಕ್ಕೆ ಬಂದವು.

ಈ ಅವಧಿಯಲ್ಲಿಯೇ ಭಾರತದ ದೊಡ್ಡ ಸಮಸ್ಯೆಯಾಗಿದ್ದ ಕ್ಷಯರೋಗ ವಿಭಾಗದಲ್ಲಿಯೂ ವೈದ್ಯಕೀಯ ತರಬೇತಿ ಪಡೆದುಕೊಂಡರು. ತರಬೇತಿಯ ನಂತರ ಕೇವಲ ಆಸ್ಪತ್ರೆ/ಸಂಸ್ಥೆಯೊಂದರಲ್ಲಿ ಕೆಲಸ ಮಾಡುವುದು ಕಮಲಾದೇವಿಯವರ ಉದ್ದೇಶವಾಗಿರಲಿಲ್ಲ. ಬದಲಿಗೆ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವುದು ಅವರ ಕನಸಾಗಿತ್ತು. ಅಕ್ಯುಪೇಷನಲ್ ಥೆರಪಿಯನ್ನು ಕೇವಲ ಸೀಮಿತ ದೃಷ್ಟಿಕೋನದಲ್ಲಿ ನೋಡುತ್ತಿದ್ದ ತಮ್ಮ ಭೋದಕರಿಗೆ, ಹೆಣಿಗೆ ಮತ್ತು ನೇಯ್ಗೆಯಂತಹ ಕೆಲಸಗಳೂ ಆಕ್ಯುಪೇಶನಲ್ ಥೆರಪಿ ಆಗಬಹುದೆಂದು ಒಪ್ಪಿಸಲು ಹರಸಾಹಸವನ್ನೇ ಅವರು ಮಾಡಬೇಕಾಯಿತು.

ಭಾರತಕ್ಕೆ ಹಿಂದಿರುಗಿ ಮುಂಬಯಿನ ಕೆ ಇ ಎಂ ಆಸ್ಪತ್ರೆಯಲ್ಲಿ ಅವರು ಕೆಲಸಕ್ಕೆ ಸೇರಿದರು. ಆಕ್ಯುಪೇಶನಲ್ ತರಬೇತಿಯು ವೈದ್ಯಕೀಯ ಕಾಲೇಜಿಗೆ ಲಗತ್ತಾಗಿದ್ದರೆ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅಗತ್ಯವಾದ ರೋಗಿಗಳು,ಬೋಧಕವರ್ಗ,ಗ್ರಂಥಾಲಯ,ವಸ್ತುಸಂಗ್ರಹಾಲಯಗಳು ಸಿಗುತ್ತವೆ ಎಂದು ಅವರಿಗೆ ಅನಿಸಿತು. ಈ ವಿಷಯವನ್ನು ಕೆಇಎಂ ಆಸ್ಪತ್ರೆಯ ಮುಖ್ಯಸ್ಥರಾಗಿದ್ದ ಆರ್.ಜಿ. ದಾಯಗುಡೆಯವರಿಗೆ ಮನವರಿಕೆ ಮಾಡಿಕೊಟ್ಟು ಅವರ ಒಪ್ಪಿಗೆ ಪಡೆದರು.

೧೯೫೦ ನವೆಂಬರ್ ನಲ್ಲಿ ರಲ್ಲಿ ಕೆಇಎಂ ಆಸ್ಪತ್ರೆಯಲ್ಲಿ ಪ್ರಾರಂಭಗೊಂಡ ಆಕ್ಯುಪೇಷನಲ್ ಥೆರಪಿ ಸೆಂಟರ್ ಏಷಿಯಾದಲ್ಲಿಯೇ ಪ್ರಪ್ರಥಮ ಆಕ್ಯುಪೇಷನಲ್ ಥೆರಪಿ ಸ್ಕೂಲೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಕಮಲಾಬಾಯಿಯವರು ಗೌರವ ನಿರ್ದೇಶಕಿಯಾಗಿದ್ದ ಈ ಕೇಂದ್ರದಲ್ಲಿ ಶ್ರೀಲಂಕಾ–ಮಲೇಶಿಯಾ–ಇಂಡೋನೇಷಿಯಾದಂತಹ ದಕ್ಷಿಣಪೂರ್ವ ರಾಷ್ಟ್ರಗಳ ವಿದ್ಯಾರ್ಥಿಗಳು ತರಬೇತಿ ಪಡೆದು ಈ ಚಿಕಿತ್ಸಾಪದ್ಧತಿಯು ತಮ್ಮ ದೇಶಗಳಲಲಿಯೂ ಪರಿಚಯಿಸುವಂತಾಯಿತು.

ಕೆ.ಎಂ.ಇ ಯ ಆಕ್ಯುಪೇಷನಲ್ ಥೆರಪಿ ಸೆಂಟರ್‌ನಲ್ಲಿ ಹೊಲಿಗೆ, ನೂಲುಗಾರಿಕೆ, ನೇಯ್ಗೆ, ಮರಗೆಲಸಕ್ಕೆ ಸಂಬಂಧಿಸಿದ ಅನೇಕ ಯಂತ್ರಗಳು, ಉಪಕರಣಗಳು ಮತ್ತು ಅಮೂಲ್ಯ ಪುಸ್ತಕಗಳನ್ನು ಸಂಗ್ರಹಿಸಿದ ಕಮಲಾಬಾಯಿಯವರು, ಒಳಾಂಗಣ–ಹೊರಾಂಗಣ ಆಟಗಳಿಗೂ ಸೆಂಟರ್‌ನಲ್ಲಿ ಅವಕಾಶ ಕಲ್ಪಿಸಿದರು. ಚಿಕಿತ್ಸೆ ಪಡೆಯುತ್ತಿರುವವರು ತಯಾರಿಸಿದ ವಸ್ತುಗಳ ಮಾರಾಟ ವ್ಯವಸ್ಥೆ, ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು, ವೈದ್ಯಕೀಯ ಸಮಾಜಸೇವೆ, ವಿಶೇಷಚೇತನರಿಗೆ ಪೌಷ್ಠಿಕ ಆಹಾರಪೂರೈಕೆ, ವಿದೇಶಿ ಸಂಘ–ಸಂಸ್ಥೆಗಳ ಧನಸಹಾಯ ಇತ್ಯಾದಿ ಅನೇಕ ಚಟುವಟಿಕೆಗಳಲ್ಲಿ ಅವರು ತೊಡಗಿಕೊಂಡಿದ್ದರು.

ಆಕ್ಯುಪೇಷನಲ್ ತರಬೇತಿಯಂತಹ ಹೊಸ ಕ್ಷೇತ್ರದಲ್ಲಿ ತರಬೇತಿ ನೀಡುವುದರೊಂದಿಗೆ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕುವಂತೆ ಮಾಡುವ ಜವಾಬ್ದಾರಿಯೂ ಕಮಲಾದೇವಿಯವರ ಮೇಲಿತ್ತು. ಹೆಣ್ಣುಮಕ್ಕಳದೇ ಪ್ರಾಬಲ್ಯವಿದ್ದ ಈ ಕ್ಷೇತ್ರಕ್ಕೆ ಗಂಡುಮಕ್ಕಳು ಆಕರ್ಷಿತರಾಗುವಂತೆ ಮಾಡಿದ್ದು ಕಮಲಾದೇವಿಯವರ ಮತ್ತೊಂದು ಸಾಧನೆ.

೧೯೫೭ ರಲ್ಲಿ ನಿವೃತ್ತರಾದ ಮೇಲೆ ನಾಗಪುರದ ಸರ್ಕಾರೀ ವೈದ್ಯಕೀಯ ಕಾಲೇಜಿನಲ್ಲಿ ಎರಡನೆಯ ಆಕ್ಯುಪೇಷನಲ್ ಥೆರಪಿ ಶಾಲೆಯನ್ನು ಸ್ಥಾಪಿಸಲು ಸರ್ಕಾರಕ್ಕೆ ನೆರವಾದರು. ಅಮೆರಿಕದ ಹೊರತಾಗಿ, ಈ ವೃತ್ತಿಯಲ್ಲಿ ಪೂರ್ಣಪ್ರಮಾಣದ ಪದವಿಯನ್ನು ನೀಡಿದ ಮೊದಲ ಸ್ಕೂಲ್ ಇದಾಯಿತು. ಇದರೊದಿಗೆ ೧೯೬೫ ರಲ್ಲಿ ಫಿಸಿಯೋಥೆರಪಿ ಕಾಲೇಜೊಂದನ್ನು ಸ್ಥಾಪಿಸಿದರು.

೫೦ರ ದಶಕದಲ್ಲಿ ಈ ವಿಷಯದಲ್ಲಿ ಸ್ಪಷ್ಟ ತಿಳುವಳಿಕೆ, ಪ್ರಾಯೋಗಿಕ ಜ್ಞಾನವನ್ನು ಹೊಂದಿದ್ದ ಐವತ್ತು ವೈದ್ಯರೂ ಭಾರತದಲ್ಲಿ ಇರಲಿಲ್ಲ. ಈ ವೃತ್ತಿಯಲ್ಲಿದ್ದ ಬಹುತೇಕ ವೈದ್ಯರು ಇಂಗ್ಲೆಂಡಿನಲ್ಲಿ ಓದಿದವರಾಗಿದ್ದರು. ಫಿಸಿಯೋಥೆರಪಿ ಕುರಿತಾದ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದ ಕಮಲಾಬಾಯಿ ಸಂಪೂರ್ಣ ಚಿಕಿತ್ಸೆಯು ಫಿಸಿಯೋಥೆರಪಿಯನ್ನೂ ಒಳಗೊಂಡಿರಲೇಬೇಕಾಗುತ್ತದ 'ಯೆಂದು ಒತ್ತಿಹೇಳುತ್ತಿದ್ದರು.

ಕೈ ಕಾಲು ಕಳೆದುಕೊಂಡ ವ್ಯಕ್ತಿಗಳು, ಬೆನ್ನುಹುರಿಗಾದ ಆಘಾತದಿಂದ ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡವರು, ಕ್ಷಯ,ಕುಷ್ಠರೋಗ, ಮುಂತಾದ ಸಮಸ್ಯೆಗಳಲ್ಲಿ ದೈಹಿಕ ಮತ್ತು ಮಾನಸಿಕ ಹೊಂದಾಣಿಕೆ ಕಲಿಸಿವುದು ಆಕ್ಯುಪೇಷನಲ್ ಥೆರಪಿಯ ಸ್ಥೂಲ ಉದ್ದೇಶ. ಗಾಯಾಳು ಸೈನಿಕರಿಗೆ ಇವೆಲ್ಲವೂ ಅತ್ಯಂತ ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ, ಪುಣೆ ಹಾಗೂ ಖಡಕಿಯ ಸೈನಿಕ ಆಸ್ಪತ್ರೆಗಳಲ್ಲಿ ಕಮಲಾಬಾಯಿಯವರ ಪ್ರಯತ್ನದಿಂದಾಗಿ ಆಕ್ಯುಪೇಷನಲ್ ಥೆರಪಿ ವಿಭಾಗಗಳನ್ನು ಆರಂಭಿಸಲಾಯಿತು. ಎಪ್ಪತ್ತರ ದಶಕದವರೆಗೂ ಸೇನಾ ಆಸ್ಪತ್ರೆಗಳಿಗೆ ಸೀಮಿತವಾಗಿದ್ದ ಈ ಚಟುವಟಿಕೆಗಳನ್ನು ನಂತರದ ವರ್ಷಗಳಲ್ಲಿ ಇತರೆಡೆಗಳಲ್ಲಿಯೂ ವಿಸ್ತರಿಸಲಾಯಿತು.

ನಡುವಯಸ್ಸಿನಲ್ಲಿ ಶಿಕ್ಷಣ–ತರಬೇತಿಯ ಶಿಸ್ತಿಗೆ ಮರಳಿದ ಕಮಲಾಬಾಯಿ ಆಟೋಟ,

ದೈಹಿಕ ಶ್ರಮದ ಚಟುವಟಿಕೆಗಳಲ್ಲಿ ಹಿಂದೆಂದೂ ತೊಡಗಿಕೊಂಡಿರಲಿಲ್ಲ, ವಿಜ್ಞಾನವನ್ನು ಅಭ್ಯಸಿಸಿರಲಿಲ್ಲ. ತೊಡಗಿಕೊಳ್ಳುತ್ತಿದ್ದ ಕೆಲಸಕಾರ್ಯಗಳನ್ನು ಅಗಾಧ ಶ್ರದ್ಧೆಯಿಂದ, ಮಾಡುತ್ತಿದ್ದರು ಅಷ್ಟೆ. ಅಮೇರಿಕೆಗೆ ಹೋಗಿ ತರಬೇತಿ ಪಡೆದುಬಂದ ಕಮಲಾದೇವಿಯವರು ಇದನ್ನೊಂದು ಜೀವನೋಪಾಯವಾಗಿ ಮಾಡಕೊಳ್ಳಲು ಬಯಸಲಿಲ್ಲ, ಬದಲಿಗೆ ಚಿಕಿತ್ಸಕರನ್ನು ತರಬೇತಿಗೊಳಿಸುವ, ಸಂಸ್ಥೆಯನ್ನು ಸ್ಥಾಪಿಸುವ ಕನಸನ್ನು ಕಂಡರು, ಕನಸುಗಳನ್ನೂ ಮೀರಿ ಸಾಧನೆಗೈದರು. ಈ ಮೊದಲು ಈ ಚಿಕಿತ್ಸೆಯನ್ನು ಬಳಸಿಯೇ ಇಲ್ಲದ ಕ್ಷೇತ್ರಗಳಲ್ಲಿಯೂ ಕೂಡ ಅದನ್ನುಪಯೋಗಿಸುವ ಕಲ್ಪನೆ-ದೂರದೃಷ್ಟಿ ಅವರಲ್ಲಿತ್ತು. ಕ್ಯಾನ್ಸರ್ ಪೀಡಿತರು-ಕುಷ್ಠರೋಗಿಗಳಿಗೆ ಆಕ್ಯುಪೇಷನಲ್ ಥೆರಪಿ ನೀಡಿದ ಮೊದಲ ಚಿಕಿತ್ಸಕರಲ್ಲಿ ಅವರೊಬ್ಬರು. ಯೋಜನೆಯು ಕಾರ್ಯಸಾಧ್ಯವೇ, ಭಾರತೀಯ ಸನ್ನಿವೇಶಕ್ಕೆ ಸೂಕ್ತವಾದುದೇ, ಕಡಿಮೆ ಖರ್ಚಿನಲ್ಲಿ ಆಗುವಂತದ್ದೇ ಎಂಬ ಪ್ರಾಯೋಗಿಕ, ವಸ್ತುನಿಷ್ಠ ಆಲೋಚನಾ ಕ್ರಮ ಅವರದಾಗಿತ್ತು. ಬೇರೆ ದೇಶಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕೈಗೊಂಡಿರುವ ಕ್ರಮಗಳನ್ನು ತಿಳಿದುಕೊಳ್ಳಬೇಕು, ನಮ್ಮ ಪರಿಸ್ಥಿತಿಗೆ ಅನುಕೂಲಕರವಾದ ಮಾರ್ಗಗಳನ್ನು ನಾವೇ ಕಂಡುಕೊಳ್ಳಬೇಕೆಂದು ಬಲವಾಗಿ ನಂಬಿದ್ದರು. ರಸ್ತೆಯಂತಹ ಮೂಲಸೌಕರ್ಯವಿಲ್ಲದ ಏಶಿಯಾದ ಹಳ್ಳಿಗಳಲ್ಲಿ ವಿಶೇಷಚೇತನರಿಗೆ ಗಾಲಿಕುರ್ಚಿಗಳನ್ನು ನೀಡಿದರೆ ಗುಡಿಸಲುಗಳಲ್ಲಿ, ಮಳೆಗಾಲದ ಕೆಸರಿನಲ್ಲಿ ಬಳಸುವುದು ಕಷ್ಟ, ಜೀವನಶೈಲಿಗೆ ಹೊಂದುವ, ಕಡಿಮೆ ವೆಚ್ಚದ ಪೂರಕ ಪರಿಕರಗಳನ್ನು ಕಂಡುಕೊಳ್ಳಬೇಕೆಂದು ಹೇಳುತ್ತಿದ್ದರು. ಪಾಶ್ಚಿಮಾತ್ಯ ಮಾದರಿಗಳನ್ನು ನಮ್ಮ ವಾತಾವರಣ-ಸನ್ನಿವೇಶಗಳಿಗನುಗುಣವಾಗಿ ಮಾರ್ಪಡಿಸಿಕೊಳ್ಳಬೇಕೆಂದು, ಸ್ಥಳೀಯ ಕಸಬುದಾರರಿಗೆ ಅಗತ್ಯ ಉಪಕರಣ/ಸಾಧನಗಳನ್ನು ತಯಾರಿಸಲು ಉತ್ತೇಜನ ನೀಡಬೇಕೆಂದು ಪ್ರತಿಪಾದಿಸುತ್ತಾ ಕಾರ್ಯ ಪ್ರವತ್ತರಾದವರು.

ವೈದ್ಯಕೀಯ ಕ್ಷೇತ್ರದಲ್ಲಿ ಅಕ್ಯುಪೇಷನಲ್ ಥೆರಪಿಗೆ ಮಹತ್ವದ ಸ್ಥಾನ ಒದಗಿಸಿ ಕೊಟ್ಟ ಕಮಲಾದೇವಿಯವರು ೧೯೭೫ ರಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿ ೧೯೭೬ ಆಗಸ್ಟ್ ೨೯ ರಂದು ದೈವಾಧೀನರಾದರು. ●


ಕರ್ನಾಟಕದ ರೈತ ಸಂಘದ ನಾಯಕರೂ ಮತ್ತು ವಿಧಾನಸಭಾ ಸದಸ್ಯರೂ ಆಗಿದ್ದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಅವರ ಅನಿರೀಕ್ಷಿತ ನಿಧನಕ್ಕೆ 'ಜನಪದ ವಿಚಾರ' ಸಂತಾಪ ಸೂಚಿಸುತ್ತದೆ.

ಹೋರಾಟ, ಮಾತುಗಾರಿಕೆ, ಹಾಸ್ಯ ಪ್ರವೃತ್ತಿ, ಮೇಲಾಗಿ ಮಾನವೀಯ ಗುಣಗಳಿಂದಾಗಿ ಪುಟ್ಟಣ್ಣಯ್ಯನವರ ನೆನಪು ನಮ್ಮಲ್ಲಿ ಸದಾ ಹಸಿರಾಗಿರುತ್ತದೆ.

ಪುಸ್ತಕ ಪರಿಚಯ

ಪೆನ್ಸಲ್ವೇನಿಯಾದ ರೂಥ್ ಬ್ಲೇರ್ ಅವರು ನ್ಯೂರೋಫಿಸಿಯಾಲಜಿಸ್ಟ್ ಆಗಿದ್ದವರು. ಲಿಂಗ ತಾರತಮ್ಯತೆ ಎಂಬುದು ಹೇಗೆ ಜೀವಿ ಶಾಸ್ತ್ರವನ್ನೂ ಬಿಟ್ಟಿಲ್ಲ ಎಂಬುದನ್ನು ತಮ್ಮ ಪ್ರಸಿದ್ಧ ಪುಸ್ತಕ 'ಸೈನ್ಸ್ ಅಂಡ್ ಜೆಂಡರ್' ಮೂಲಕ ವಿವರಿಸಿದವರು. ಅವರ ಸಿದ್ಧಾಂತಗಳು ಮಹಿಳಾ ಅಧ್ಯಯನದ ಮೂಲ ಆಕರಗಳಾಗಿವೆ. ಅವರ ಪುಸ್ತಕ 'ಸೈನ್ಸ್ ಅಂಡ್ ಜೆಂಡರ್' ಅನ್ನು ಲೇಖಕಿ ರಾಜರಾಜೇಶ್ವರಿಯವರು ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಿಮಗಾಗಿ ಪರಿಚಯಿಸಿದ್ದಾರೆ.

'ಸೈನ್ಸ್ ಅಂಡ್ ಜಂಡರ್' ಪುಸ್ತಕವು ಮಹಿಳೆಯರ ಕೀಳರಿಮೆಯ ವಿವರವಾದ ಪುರಾಣವನ್ನು ಸೃಷ್ಟಿಸುವಲ್ಲಿ ವಿಜ್ಞಾನದ ಪಾತ್ರವನ್ನು ವಿವರಿಸುತ್ತದೆ. ಲೇಖಕಿ ರೂಥ್ ಬ್ಲೇರ್ (೧೯೨೩-೧೯೮೮) ಅವರು ವಿಜ್ಞಾನ ಕ್ಷೇತ್ರದಲ್ಲಡಗಿರುವ ಲಿಂಗತಾರತಮ್ಯದ ಬಗ್ಗೆ ಬರೆದಿರುವ ಮೊದಲ ಸ್ತ್ರೀಸಮಾನತಾವಾದಿಯಾಗಿದ್ದಾರೆ. ವೈದ್ಯೆಯಾಗಿ ವೃತ್ತಿಯ್ನನಾರಂಭಿಸಿದ ಈಕೆ ಪತಿಯೊಂದಿಗೆ ಬಡವರಿಗಾಗಿ ಕ್ಲಿನಿಕ್ ನಡೆಸಿದರು.



ನಾಗರಿಕ ಹಕ್ಕುಗಳ ಪ್ರತಿಪಾದಕಿಯಾಗಿದ್ದ ಅವರು ದಿ ಹೌಸ್ ಆಫ್ ಯುಎನ್-ಅಮೆರಿಕ ಆಕ್ಟಿವಿಸ್ಟ್ ಕಮಿಟಿಯಲ್ಲಿ (HUAAC) ಕೆಲ ಸಮಯ ಕಾರ್ಯನಿರ್ವಹಿಸಿದ್ದರು. ಅವರ ಅಸಹಕಾರ ವ್ಯಕ್ತಿತ್ವದಿಂದ ಅವರನ್ನು HUAAC ಕಪ್ಪುಪಟ್ಟಿಗೆ ಸೇರಿಸಲಾಯಿತು. ಅದರಿಂದಾಗಿ ವೈದ್ಯರಾಗಿ ಮುಂದುವರೆಯುವ ಅವಕಾಶ ಕಳೆದುಕೊಂಡರು. ನಂತರ ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿ ನ್ಯೂರೋಫಿಸಿಯೋಲಾಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡು ವಿಸ್ಕಾನ್ಸಿನ್- ಮ್ಯಾಡಿಸನ್ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕಾರ್ಯಕ್ರಮ ವಿಭಾಗದಲ್ಲಿ ನ್ಯೂರೋಫಿಸಿಯಾಲಜಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಸಸ್ತನಿಗಳ ಹೈಪೋಥ್ಯಾಲಮಸ್ ಕುರಿತು ವಿಶೇಷ ಅಧ್ಯಯನ ಮಾಡಿದ್ದು ತಮ್ಮ ಸಂಶೋಧನೆಗಳ ಬಗ್ಗೆ ಹಲವಾರು ವೈಜ್ಞಾನಿಕ ಲೇಖನಗಳು ಹಾಗೂ ಮೂರು ಮೋನೋಗ್ರಾಫ್‌ಗಳನ್ನು ಬರೆದಿದ್ದಾರೆ. ನಂತರದ ದಿನಗಳಲ್ಲಿ ಸ್ತ್ರೀಸಮಾನತಾವಾದಿಯಾಗಿ ರೂಪಗೊಂಡರು.

೧೯೭೦ರಲ್ಲಿ ಬ್ಲೇರ್‌ರವರು ಜೀವವಿಜ್ಞಾನವು ಹೇಗೆ ಲಿಂಗ ಹಾಗೂ ಇತರ ಸಾಂಸ್ಕೃತಿಕ ಪಕ್ಷಪಾತಗಳಿಂದ ಬಾಧಿತವಾಗಿದೆ ಎಂದು ತಿಳಿದುಕೊಳ್ಳಲು ಆರಂಭಿಸಿ, ವಿಜ್ಞಾನದ ಸಿದ್ಧಾಂತಗಳನ್ನು ಹಾಗೂ ಅಭ್ಯಾಸಗಳನ್ನು ಮಹಿಳಾಪರ ದೃಷ್ಟಿಕೋನದಿಂದ ವಿಶ್ಲೇಷಿಸಲು ಪ್ರಾರಂಭಿಸಿದರು. ೧೯೬೦ರ ಕೊನೆಯಲ್ಲಿ ಆರಂಭವಾದ ಮಹಿಳಾ ಅಧ್ಯಯನ ಕಾರ್ಯಕ್ರಮಗಳು ವಿಭಿನ್ನತೆ ಹಾಗೂ ಆಳದ ವ್ಯಾಪ್ತಿಯಲ್ಲಿ ಅಳತೆಗೆ ಮೀರಿ ಬೆಳೆದಿವೆ. ಅದರಲ್ಲೂ ಕಲೆ, ಇತಿಹಾಸದ ವಿಭಾಗಗಳಲ್ಲಿ ಮಹಿಳಾ ದೃಷ್ಟಿಕೋನದ ಸಂಶೋಧನೆ ಹಾಗೂ ವಿಶ್ಲೇಷಣೆಗಳು ಹೆಚ್ಚಾಗಿವೆ. ಇವುಗಳಿಗೆ ಹೋಲಿಸಿದಲ್ಲಿ ವಿಜ್ಞಾನ ವಿಭಾಗದಲ್ಲಿ ಮಹಿಳಾ ದೃಷ್ಟಿಕೋನದ ವಿಶ್ಲೇಷಣೆಗಳು ನಗಣ್ಯ. ಈ ಪುಸ್ತಕ ಬಂದು ಸುಮಾರು ಮೂರು ದಶಕಗಳಾಗಿದ್ದರೂ, ಮಹಿಳಾ ಚಿಂತನೆ ಹೊಂದಿದ ಇಂತಹ ವಿಜ್ಞಾನ ವಿಮರ್ಶೆಗಳು ತುಂಬಾ ವಿರಳ.

ಇದಕ್ಕೆ ಇವ್ಲಿನ್ ಫಾಕ್ಸ್ ಕೆಲ್ಲರ್ ಅವರು ಮೂರು ಕಾರಣಗಳನ್ನು ನೀಡುತ್ತಾರೆ. ಮೊದಲನೆಯದು ವಿಜ್ಞಾನವು ವಸ್ತುನಿಷ್ಠವಾಗಿದ್ದು, ಮೌಲ್ಯಯುತ ತಾರ್ಕಿಕ ಚರ್ಚೆಗೆ ಒಳಪಟ್ಟಿರುತ್ತದೆನ್ನುವ ವಿಜ್ಞಾನಿಗಳ ಹಾಗೂ ಜನಮಾನಸದಲ್ಲಿನ ದೃಢವಿಶ್ವಾಸ ವಿಜ್ಞಾನದ ಸಿದ್ಧಾಂತಗಳನ್ನು ಪ್ರಬಲ ಹಾಗೂ ಶಕ್ತಿಯುತವನ್ನಾಗಿಸಿದೆ. ಎರಡನೆಯದು, ವಿಜ್ಞಾನದ ಜ್ಞಾನವಿರುವ ಮಹಿಳೆಯರ ಕಡಿಮೆ ಸಂಖ್ಯೆ, ಅವರಲ್ಲಿ ಮಹಿಳಾಚಿಂತನೆಯ ಕೊರತೆ, ಈ ವಿರಳಾತಿ ವಿರಳರಲ್ಲಿ ವಿಜ್ಞಾನ ಹಾಗೂ ಲಿಂಗತ್ವದ ಬಗ್ಗೆ ಬರೆಯುವವರು ಮತ್ತೂ ವಿರಳವಾಗಿರುವುದು. ಮೂರನೆಯದಾಗಿ, ಬೇರೆ ಕ್ಷೇತ್ರಗಳಲ್ಲಿ ಪರಿಣಿತಿಯಿರುವ ಮಹಿಳಾ ಚಿಂತಕರಲ್ಲಿರುವ ವಿಜ್ಞಾನದಲ್ಲಿನ ಕಡಿಮೆ ತಿಳುವಳಿಕೆ. ಜೊತೆಗೆ, ವಿಜ್ಞಾನದ ಬಗ್ಗೆ ತಿಳಿದುಕೊಳ್ಳಲು ಅವರಿಗಿರುವ ಹೆದರಿಕೆ ಹಾಗೂ ಹಿಂಜರಿಕೆಗಳು ಅವರನ್ನು ಬೌದ್ಧಿಕ ಸಂವಾದಗಳಲ್ಲಿ ತೊಡಗಿಕೊಳ್ಳಲು ಬಿಡುತ್ತಿಲ್ಲ. ಹೀಗಾಗಿ ಮಹಿಳಾಚಿಂತಕರ ವೃತ್ತದಲ್ಲಿ ವಿಜ್ಞಾನದ ಬಗ್ಗೆ ತಿಳಿವಿರುವವರು, ಸಮರ್ಥವಾಗಿ ಬರೆಯುವವರು ಮಹಿಳಾ ಚಿಂತಕರ ನಡುವೆ ಉದ್ಭವಿಸುವ ಭಾಗಶಃ ಬೌದ್ಧಿಕ ಪ್ರತ್ಯೇಕತೆಯನ್ನುಭವಿಸುತ್ತಾರೆಂದು ವಿಶ್ಲೇಷಿಸಿದ್ದಾರೆ. ಈ ಪುಸ್ತಕದಲ್ಲಿ ಲೇಖಕಿಯು ವಿಜ್ಞಾನ ಕೂಡ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಯಾಗಿಸಲು ನೀಡಿರುವ ಕೊಡುಗೆಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

ಮೊದಲ ಅಧ್ಯಾಯದಲ್ಲಿ ವಿಜ್ಞಾನ, ವಿಜ್ಞಾನಿಗಳು ಹಾಗೂ ಸಾಮಾನ್ಯ ವೈಜ್ಞಾನಿಕ ವಿಧಾನ, ನಿರ್ದಿಷ್ಟ ಇತಿಹಾಸ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳು, ಪುಸ್ತಕದಲ್ಲಿರುವ ಮುಖ್ಯವಿಷಯಗಳನ್ನು ಪ್ರಸ್ತಾಪಿಸುತ್ತದೆ. ಸ್ವಾಯತ್ತತೆಗಾಗಿ ಹುಟ್ಟುವ ಅಶಾಂತಿ ಹಾಗೂ ಹೋರಾಟದ ಸಮಯಗಳಲ್ಲಿ ಹುಟ್ಟಿದ ಜೀವವಿಜ್ಞಾನದ ನಿರ್ಣಾಯಕ ಸಿದ್ಧಾಂತಗಳು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆಗಳಿಗೆ ಪ್ರಬಲ ವಿವರಣೆ ನೀಡುತ್ತವೆ. ೧೯೭೦-೮೦ರ ದಶಕಗಳಲ್ಲಿ ಮಾನವ ಸ್ವಭಾವಗಳು ಹಾಗೂ ಸಾಮರ್ಥ್ಯಗಳನ್ನು ವಿವರಿಸುವ ಸಿದ್ಧಾಂತಗಳು, ವಿಶ್ಲೇಷಣೆಗಳನ್ನು ಜೀನ್‌ಗಳ ಮಟ್ಟಕ್ಕೆ ತಲುಪಿದ್ದು, ಅಲ್ಲಿ ಮತ್ತೊಮ್ಮೆ ಪ್ರಬಲ ಸಾಂಸ್ಕೃತಿಕ ಪ್ರಭಾವವಿರುವುದನ್ನು ವಿವರಿಸುತ್ತಾರೆ.

ಎರಡನೇ ಅಧ್ಯಾಯದಲ್ಲಿ ವಿಲ್ಸೋನಿಯನ್ ಸಾಮಾಜಿಕ- ಜೀವವಿಜ್ಞಾನದ ಸಿದ್ಧಾಂತಗಳು, ವಿಧಾನಗಳು, ಹಾಗೂ ಪ್ರಮೇಯಗಳ ವಿವರವಾದ ವಿಮರ್ಶೆಯಿದೆ. ೧೯೭೫ರಲ್ಲಿ ಇ.ಓ. ವಿಲ್ಸನ್ ಅವರ ಸಾಮಾಜಿಕ- ಜೀವವಿಜ್ಞಾನ ಮನುಷ್ಯನ ಎಲ್ಲಾ ವರ್ತನೆಗಳು, ಸ್ವಭಾವಗಳು, ಸಾಮಾಜಿಕ ಸಂಬಂಧಗಳು ಜೈವಿಕವಾಗಿ, ಹಾಗೂ ವಿಕಸನೀಯವಾಗಿ ನಿರ್ಧಾರಿತವಾಗುತ್ತವೆ ಎಂದೂ, ಮಾನವ

ಸ್ವಭಾವದ ಅಂತಿಮ ಶಿಸ್ತೆಂದು ಪರಿಚಯಿಸಿದ್ದಾರೆ. ವಿಜ್ಞಾನದಂತೆಯೇ ಸಾಮಾಜಿಕ ಜೀವಿವಿಜ್ಞಾನ ಕೂಡ ದೋಷಪೂರಿತವಾಗಿದ್ದು ಜೈವಿಕ–ಪರಿಸರದ ಜೈವಿಕ ನಿರ್ಣಾಯಕ ಸಿದ್ಧಾಂತಗಳೂ ಕೂಡ ಕೇವಲ ರಾಜಕೀಯ ಮತ್ತು ಸೈದ್ಧಾಂತಿಕ ಉದ್ದೇಶಗಳಿಗೆ ಮಾತ್ರ ಉಪಯುಕ್ತವೆಂದು ನಿರೂಪಿಸಲು ಪ್ರಯತ್ನಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ, ವಿಕಸನೀಯ, ಭ್ರೂಣವಿಜ್ಞಾನ ಹಾಗೂ ಪ್ರಸವಾನಂತರದ ಮಾನವನ ಮೆದುಳು ಬೆಳವಣಿಗೆಯನ್ನು ವಿವರಿಸುತ್ತದೆ. ಮೆದುಳಿನ ರಚನೆ ಹಾಗೂ ಕ್ರಿಯಾತ್ಮಕ ಬೆಳವಣಿಗೆಗೆ ಅಗತ್ಯವಾದ ವಿಷಯಗಳು ಆಯಾ ಪ್ರದೇಶದ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರುತ್ತದೆ. ಏಕೆಂದರೆ ಸಾಂಸ್ಕೃತಿಕ ವಿಷಯಗಳಿಂದ ಜೀವಿವಿಜ್ಞಾನವನ್ನು ಬೇರ್ಪಡಿಸುವುದು ಅಸಾಧ್ಯವಾಗಿರುವ ಸಂದರ್ಭದಲ್ಲಿ ಮಾನವನ ವರ್ತನೆಗಳಲ್ಲಿ ಹಾಗೂ ಸ್ವಭಾವಗಳ ಅಭಿವೃದ್ಧಿಯಲ್ಲಿ ಸಂಸ್ಕೃತಿಯ ಪ್ರಭಾವ ಒಳಗೂ ಹೊರಗೂ ಹಾಸುಹೊಕ್ಕಾಗಿದೆ. ಇದು ಮೆದುಳುಗಳ ಅಪಾರ ಸಾಮರ್ಥ್ಯಗಳಿಗೆ ಸೀಮಿತ ಚೌಕಟ್ಟು ಒದಗಿಸುತ್ತದೆ ಎಂದು ವಿಮರ್ಶಿಸಲಾಗಿದೆ.

ನಾಲ್ಕನೇ ಅಧ್ಯಾಯವು ಪುರುಷ ಹಾಗೂ ಸ್ತ್ರೀಯರ ಹಾರ್ಮೋನುಗಳು ಹಾಗೂ ಅವರ ಗುಣಗಳನ್ನು ಲಿಂಗ ಬೇಧಗಳಿಗೆ ಸಮೀಕರಿಸಿ ಹಾರ್ಮೋನುಗಳ ಅಧ್ಯಯನದ ಕುರಿತದ್ದಾಗಿದೆ. ಇಲಿಗಳ ಮೇಲಿನ ಸಂಶೋಧನೆಯ ಆಧಾರದ ಮೇಲೆ ಮನುಷ್ಯರ ಲಿಂಗಭೇಧ ಗುಣಗಳಾದ ಆಕ್ರಮಣಶೀಲತೆ, ಪ್ರಾಬಲ್ಯ, ಬುದ್ಧಿವಂತಿಕೆ, ಲೈಂಗಿಕತೆ ಹಾಗೂ ಲಿಂಗ ಗುರುತಿಸುವಿಕೆಗೆ ಕಾರಣಗಳೆಂಬ ಪರಿಕಲ್ಪನಾ ಮಾದರಿಯನ್ನು ಹೇಗೆ ರೂಪಿಸಲಾಗಿದೆ ಎಂದು ವಿವರಿಸಿದ್ದಾರೆ. ಐದನೇ ಅಧ್ಯಾಯವು ಮಾನವನ ಸಾಂಸ್ಕೃತಿಕ ವಿಕಸನವನ್ನು ಲಭ್ಯ ಪುರಾತತ್ವ ಶಾಸ್ತ್ರ, ಪ್ರೈಮೆಟಾಲಜಿ ಹಾಗೂ ಮಾನವ ಶಾಸ್ತ್ರಗಳ ಪುರಾವೆಗಳು ಮಾನವನು ಬೇಟೆಗಾರನಾಗಿ ಹೊಮ್ಮಿರುವ ಸಿದ್ಧಾಂತಗಳ ಆಧಾರದಲ್ಲಿ ಮಾನವ ವಿಕಸನದ ಸಮಗ್ರ ವಿವರಣೆಯನ್ನು ನೀಡಲು ಪ್ರಯತ್ನಿಸುತ್ತದೆ.

ಆರನೇ ಅಧ್ಯಾಯ ಮಹಿಳಾ ಚಿಂತನೆಯ ಮಾನವಶಾಸ್ತ್ರವು ಸಾಂಪ್ರದಾಯಿಕ ಮಾನವಶಾಸ್ತ್ರದ ಸಿದ್ಧಾಂತಗಳು ಹಾಗೂ ಸಾರ್ವತ್ರಿಕ ಊಹೆಗಳಿಗೆ ಸವಾಲು ನೀಡುತ್ತದೆ. ಪಾಶ್ಚಾತ್ಯ ಕೈಗಾರಿಕಾ ಸಮಾಜದಲ್ಲಿ ಮಹಿಳೆಯರ ಅಧೀನ ಸ್ಥಾನಕ್ಕೆ ಐತಿಹಾಸಿಕ ಕಾರಣಗಳು ಹಾಗೂ ಸನ್ನಿವೇಶಗಳನ್ನು, ಪುರುಷ ಪ್ರಧಾನ ಸಂಸ್ಕೃತಿಗೆ ಕಾರಣಗಳನ್ನು ಹುಡುಕುತ್ತದೆ.

ಏಳನೆಯ ಅಧ್ಯಾಯದಲ್ಲಿ ಲೈಂಗಿಕತೆ ಹಾಗೂ ಪುರುಷ ಪ್ರಾಧಾನ್ಯತೆ, ಮಹಿಳೆಯರ ದಮನಕ್ಕೆ ವಿಜ್ಞಾನ ಹಾಗೂ ಔಷಧ ಕ್ಷೇತ್ರಗಳ ಪಾತ್ರ ವಿವರಿಸುತ್ತದೆ. ಮಹಿಳೆಯರನ್ನು ಎಲ್ಲಾ ರೀತಿಯಲ್ಲಿಯೂ ತುಳಿದಿಡುವ ಪುರುಷ ಪ್ರಧಾನ ಸಮಾಜದ ಸಿದ್ಧಾಂತಗಳನ್ನು ವಿವರಿಸುತ್ತದೆ.

ಕೊನೆಯ ಅಧ್ಯಾಯ ಪುರುಷ ಪ್ರಧಾನ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿಜ್ಞಾನದ ಸೂಚ್ಯ ಪರಿಭಾಷೆಯ ವಸ್ತುನಿಷ್ಠತೆ, ಸತ್ಯ, ಹಾಗೂ ದ್ವಿರೂಪ ರಚನೆಯನ್ನು ವಿಮರ್ಶಿಸುತ್ತದೆ. ದ್ವಿರೂಪ ಕಲ್ಪನೆಯನ್ನು ಧಿಕ್ಕರಿಸುತ್ತಾ ಸ್ತ್ರೀಸಮಾನತಾವಾದಿ ವಿಜ್ಞಾನವನ್ನು ಪ್ರತಿಪಾದಿಸುತ್ತಾ, ನೈಸರ್ಗಿಕ ಹಾಗೂ ಸಾಮಾಜಿಕ ವಿದ್ಯಮಾನಗಳ ನಿರಂತರ ಬದಲಾವಣೆಯ ಸಂಕೀರ್ಣ ಸಂಭವನೀಯತೆಯನ್ನು ಅರ್ಥೈಸಿಕೊಂಡು ಮುಂದುವರೆಯುವ ಬಗ್ಗೆ ವಿವರಣೆ ನೀಡುತ್ತದೆ. ●

ಹೂವು ಮುಳ್ಳಿನ ಹಾದಿಯಲ್ಲಿ ಮಹಿಳಾ ಸಂಘಟನೆ

– ರಾಜರಾಜೇಶ್ವರಿ ಜೋಷಿ

ರಾಜರಾಜೇಶ್ವರಿ ಜೋಷಿ ಖಾನಾಪುರ ತಾಲೂಕಿನ ಹಿಂದುಳಿದ ಹಳ್ಳಿಗಳಲ್ಲಿ ಹಲವು ವರ್ಷಗಳಿಂದ 'ಜಾಗ್ರತಿ' ಸಂಸ್ಥೆಯ ಮೂಲಕ ಮಹಿಳಾ ಜಾಗ್ರತಿಯಲ್ಲಿ ತೊಡಗಿಕೊಂಡಿರುವವರು. ತಮ್ಮ ಸಂಘಟನೆಯ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಗ್ರಾಮೀಣ ಭಾರತದಲ್ಲಿ ಪುರುಷ ಮಹಿಳೆಗಿಂತ ಶ್ರೇಷ್ಠ ಎಂಬ ನಂಬಿಕೆ ಇನ್ನೂ ಅಲುಗಾಡದೆ ಗಟ್ಟಿಯಾಗಿ ಬೇರೂರಿಕೊಂಡಿದೆ. ಅವನು ದುಡಿದು ತರುವವನು, ಹೆಚ್ಚು ಶ್ರಮ ಬೇಡುವ ಕೆಲಸ ಮಾಡುವವನು, ಆ ಕಾರಣಕ್ಕಾಗಿ ಕುಡಿಯುತ್ತಾನಾದ್ದರಿಂದ ಅದು ತಪ್ಪಲ್ಲ, ಮನೆಯ ಯಜಮಾನನಾದ್ದರಿಂದ ಹೆಂಡತಿಗೆ ಹೊಡೆದರೆ ತಪ್ಪೇನಿಲ್ಲ ಎಂಬ ವಿಚಾರವನ್ನು ಹಳ್ಳಿಯ ಜನ ತುಂಬ ಸಹಜವಾಗಿಯೇ ಒಪ್ಪಿಕೊಳ್ಳುತ್ತಾರೆ. ಹೀಗಾಗಿ ಗಂಡ ಕೊಡುವ ಹಿಂಸೆಯನ್ನು ಪ್ರಶ್ನಿಸಬಹುದು ಎಂದು ಎಷ್ಟೋ ಜನಕ್ಕೆ ಅನ್ನಿಸುವುದೇ ಇಲ್ಲ. ಹಿಂಸೆ ತೀರ ಸಹಿಸಲಸಾಧ್ಯವಾದಾಗ ತವರುಮನೆಗೆ ಹೋಗುವುದು, ಕೆಲದಿನಗಳ ನಂತರ 'ಕೊಟ್ಟ ಹೆಣ್ಣು ಕುಲಕ್ಕೆ ಹೊರತು' ಎಂಬ ಗಾದೆಯನ್ನನುಸರಿಸಿ ಮತ್ತೆ ಗಂಡನ ಮನೆಗೆ ಬರುವುದು, ಮತ್ತೆ ಅವನು ಕೊಡುವ ಹಿಂಸೆ ಅನುಭವಿಸುವುದು ನಡೆದೇ ಇರುತ್ತದೆ. ಹಿಂಸೆ ಅತಿಯಾದಾಗ, ಮಹಿಳೆಯರ ಸಂಘಟನೆಯೊಂದಿದೆ ಎಂದು ಗೊತ್ತಾದಾಗ, ಕೆಲ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಸಂಘಟನೆಯ ಮುಂದಿಡುತ್ತಿದ್ದಾರೆ. ವರದಕ್ಷಿಣೆ ಕಿರುಕುಳ ಅನುಭವಿಸಿದವರು, ಕುಡುಕ ಗಂಡನ ಹೊಡೆತ ತಾಳದೇ ರೋಸಿ ಹೋದವರು, ನಂಬಿದ ಗಂಡ ಬೇರೆ ಹೆಂಗಸನ್ನು ಕಟ್ಟಿಕೊಂಡಾಗ ಸಹಾಯ ಕೇಳಿ ಮಹಿಳೆಯರು ಸಂಘಟನೆಗೆ ಬಂದಿದ್ದಾರೆ. ಬಂದವರಲ್ಲನೇಕರು ತಮಗೆ ಸಮಾಧಾನವಾಗುವಂಥ ಪರಿಹಾರವನ್ನೂ ಕಂಡುಕೊಂಡಿದ್ದಾರೆ.

ಸವಿತಾ (ಹೆಸರು ಬದಲಿಸಲಾಗಿದೆ) ನಮ್ಮ ಜಾಗೃತ ಮಹಿಳಾ ಒಕ್ಕೂಟದ ಸದಸ್ಯೆ. ಮಾತಿನಲ್ಲಿ ಜಾಣೆ, ಗ್ರಹಿಕೆಯಲ್ಲಿ ಚುರುಕು. ಒಕ್ಕೂಟದ ಮೂಲಕ ಪಡೆದ ತರಬೇತಿಗಳನ್ನು ಸರಿಯಾಗಿ ಗ್ರಹಿಸಿಕೊಂಡು ತನ್ನ ಕೇರಿಯ ಜನಕ್ಕೆ ತಿಳಿಸಿಕೊಡುವವಳು, ನಮ್ಮೆಲ್ಲ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದುಕೊಂಡು ಭಾಗವಹಿಸುವವಳು. ಆದರೆ, ಮನೆಯಲ್ಲಿ ತಾನು ಅನುಭವಿಸುವ ಹಿಂಸೆಯನ್ನು ಯಾವತ್ತೂ ಹೇಳಿಕೊಂಡಿರಲಿಲ್ಲ. ಆಕಸ್ಮಿಕವಾಗಿ ಸವಿತಾಳನ್ನು ಅವಳ ಗಂಡ ಕುಡಿದು ತುಂಬ ಹೊಡೆಯುತ್ತಾನೆ ಎಂಬ ವಿಚಾರ ಒಕ್ಕೂಟಕ್ಕೆ ಗೊತ್ತಾಗಿ ನಮ್ಮ ಒಂದು ತಂಡ ಅವಳ ಮನೆಗೆ ಹೋಯಿತು. ಮನೆಯಲ್ಲಿ ಸವಿತಾ ಒಬ್ಬಳೇ. ತಾನು ಅನುಭವಿಸುತ್ತಿರುವ ದೌರ್ಜನ್ಯ ನಿಜವೆಂದೂ, ಮನೆಯ ಮರ್ಯಾದೆಗಂಜಿ ಯಾರಿಗೂ ಹೇಳಲಿಲ್ಲ ಎಂದು ಒಪ್ಪಿಕೊಂಡಳು. ನಮ್ಮ ತಂಡ ಮಾಡಿದ್ದಿಷ್ಟೆ. ಅವಳ ಗಂಡನಿಗೆ ಒಂದು ನೋಟೀಸ್ ಬರೆದು ಒಕ್ಕೂಟದ ಕಚೇ-ರಿಗೆ ಬಂದು ಭೇಟಿಯಾಗಬೇಕೆಂದು ತಿಳಿಸಲಾಗಿತ್ತು. ಆ ನೋಟೀಸನ್ನು ಓದಿದ ಸವಿತಾಳ ಗಂಡ ಅವಳೊಂದಿಗೆ ಜಗಳ ಮಾಡಿದ, ಮನೆಯ ಮರ್ಯಾದೆಯನ್ನು ಕಳೆದೆ ಎಂದು ಶಪಿಸಿದ. ನೀನು

ಹೊಡೆಯುವುದನ್ನು ಮುಂದುವರಿಸಿದರೆ ಇನ್ನು ಮುಂದೆ ಹೀಗೇ ಎಂದು ಸವಿತಾ ಮಾರುತ್ತರ ಕೊಟ್ಟಳು. ಅವನೇನು ಒಕ್ಕೂಟದ ಕಚೇರಿಗೆ ಬರಲಿಲ್ಲ. ಮನೆಯಲ್ಲಿ ಗಂಡ ಹೆಂಡಿರ ನಡುವೆ ಮೌನ ಯುದ್ಧ ಶುರುವಾಗಿತ್ತು. ಮನೆಯಲ್ಲಿ ಊಟ ಮಾಡುವುದನ್ನು, ಮನೆಗೆ ಅವಶ್ಯಕ ಸಾಮಗ್ರಿಗಳನ್ನು ತರುವುದನ್ನು ನಿಲ್ಲಿಸಿದ್ದ. ಆಗಾಗ ದೂರವಾಣಿ ಮೂಲಕ ಕರೆ ಮಾಡಿ ಒಕ್ಕೂಟದ ಸದಸ್ಯರು ತಮ್ಮ ಬೆಂಬಲ ಗಟ್ಟಿಯಾಗಿದೆ ಎಂದು ಹೇಳುತ್ತ ಅವಳಲ್ಲಿ ಧೈರ್ಯ ತುಂಬುತ್ತಿದ್ದರು. ಸವಿತಾ ತಾನು ಮಾಡಿದ್ದು ತಪ್ಪು ಎಂದು ಒಪ್ಪುವವಳಲ್ಲ ಎಂದು ಖಾತ್ರಿಯಾಯಿತೇನೋ. ಗಂಡನ ಮೌನ ನಿಧಾನಕ್ಕೆ ಕರಗಿತು. ವರ್ತನೆಯಲ್ಲಿ ಬದಲಾವಣೆ ಕಂಡು ಬಂತು. ಸುಧಾರಣೆಯಾಗಿದ್ದು ಕಂಡುಬಂದ ನಂತರ ಒಕ್ಕೂಟದಿಂದ "ನೀವು ಬದಲಾಗಿದ್ದಕ್ಕೆ ಅಭಿನಂದನೆಗಳು, ದೌರ್ಜನ್ಯಕ್ಕೊಳಗಾಗುವ ಮಹಿಳೆಯ ಬೆಂಬಲಕ್ಕೆ ಒಕ್ಕೂಟ ಯಾವಾಗಲೂ ಇರುತ್ತದೆ" ಎಂಬ ಸಂದೇಶವನ್ನು ಹೊತ್ತ ಪತ್ರವೊಂದನ್ನು ಸವಿತಾಳ ಗಂಡನಿಗೆ ಕಳಿಸಿದೆವು. ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇನೆ ಎಂದು ಸವಿತಾಳ ಗಂಡ ಮಾತು ಕೊಟ್ಟ. ಕೊಟ್ಟ ಮಾತಿನಂತೆ ಈವರೆಗೂ ನಡೆದುಕೊಂಡಿದ್ದಾನೆ. ಸಂಘಟನೆ ಯಾಕೆ ಬೇಕು ಎಂದು ಮಹಿಳೆಯರೊಂದಿಗೆ ಮಾತನಾಡುವಾಗ ಸವಿತಾ ತನ್ನ ಉದಾಹರಣೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

ಕೇವಲ ವೈಯಕ್ತಿಕ ನೆಲೆಯಲ್ಲಲ್ಲದೆ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವಲ್ಲಿಯೂ ಮಹಿಳೆಯರ ಸಂಘಟನೆ ಸಹಾಯಕವಾಗಿದೆ. ಕಳೆದ ವರ್ಷ ಒಂಟಿ ಮಹಿಳೆಯರ ಅಂತ್ಯೋದಯ ಕಾರ್ಡನ್ನು ರದ್ದು ಮಾಡಿದ ರಾಜ್ಯ ಸರಕಾರ ಅನೇಕ ಹೋರಾಟಗಳ ನಂತರ ನಿರ್ಗತಿ-ಕ ಮಹಿಳೆಯರು, ವೃದ್ಧರು, ಚಿಕ್ಕ ಮಕ್ಕಳಿರುವ ವಿಧವೆಯರು, ಎಚ್ ಐ ವಿ ಪೀಡಿತರು ಮತ್ತು ಅಂಗವಿಕಲರು ಮತ್ತೆ ಅಂತ್ಯೋದಯ ಕಾರ್ಡ್ ಪಡೆಯಬಹುದೆಂದು ಆದೇಶ ಹೊರಡಿಸಿತ್ತು. ಆ ಆದೇಶದನ್ವಯ ಖಾನಾಪುರ ತಾಲೂಕಿನ ಅರ್ಹ ಮಹಿಳೆಯರು ಅಂತ್ಯೋದಯ ಕಾರ್ಡ್ ಹೊಂದುವುದಕ್ಕಾಗಿ ಅರ್ಜಿ ಗುಜರಾಯಿಸಿದ್ದರು. ಅನೇಕ ತಿಂಗಳುಗಳು ಕಳೆದರೂ ಸಂಬಂಧ ಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಯಾವ ಕೆಲಸವನ್ನೂ ಮಾಡಿರಲಿಲ್ಲ. ದುಡಿದು ತಿನ್ನುವ ತಾಕತ್ತಿಲ್ಲದ, ಪಡಿತರದಲ್ಲಿ ತಿಂಗಳಿಗೆ ಸಾಕಾಗುವಷ್ಟು ಧಾನ್ಯ ಸಿಗದೇ ಬಳಲಿದ ಅಮ್ಮಂದಿರು, ನಿರ್ಗತಿ-ಕ, ಅಸಹಾಯಕ ಅಂಗವಿಕಲ ಮಹಿಳೆಯರು, ಸಂಘಟಿತರಾಗಿ ಬೆಳಗಾವಿ ಜಿಲ್ಲೆಯ ಖಾನಾಪುರದ ತಹಶೀಲ್ದಾರರ ಕಚೇರಿಯೆದುರು ಧರಣಿ ಕುಳಿತರು. 'ಮಹಿಳೆಯರೆಲ್ಲ, ಸ್ವಲ್ಪ ಹೊತ್ತು ಕಾಯುತ್ತಾರೆ, ಮತ್ತೆ ಮನೆಗೆ ಹೋಗುತ್ತಾರೆ' ಎಂಬ ಉದಾಸೀನತೆ ಅಧಿಕಾರಿಗಳದ್ದು. ಕತ್ತಲಾಗಿ ತಹಶೀಲ್ದಾರರು ಮನೆಗೆ ಹೋಗಲು ತಯಾರಾಗಿ ಕಾರಿನಲ್ಲಿ ಕುಳಿತರೂ ಮಹಿಳೆಯರು ಏಳಲಿಲ್ಲ. "ಹಸಿದ ಅಮ್ಮಂದಿರು ಇಲ್ಲಿ ಕುಳಿತಿದ್ದಾರೆ, ನೀವು ಮನೆಗೆ ಹೋಗಿ ಊಟಮಾಡುತ್ತೀರ?" ಎಂಬ ಇವರ ಪ್ರಶ್ನೆಗೆ ಉತ್ತರಿಸಲಾಗದೇ ತಹಶೀಲ್ದಾರರು ಮತ್ತೆ ಕಚೇರಿಗೆ ಹೋಗಿ ಆಗಬೇಕಾದ ಕೆಲಸಗಳನ್ನು ಮುಗಿಸಲೇ ಬೇಕಾಯಿತು. ತಡ ರಾತ್ರಿಯಾದ ಮೇಲೆ, ಎರಡು ದಿನಗಳಲ್ಲಿ ಅಂತ್ಯೋದಯ ಕಾರ್ಡುಗಳು ಮನೆ ತಲುಪುತ್ತವೆ ಎಂಬ ಲಿಖಿತ ಆಶ್ವಾಸನೆಯೊಂದಿಗೇ ಮಹಿಳೆಯರು ಮನೆಗೆ ಮರಳಿದ್ದು. ಎರಡು ದಿನಗಳ ನಂತರ ಕಾರ್ಡುಗಳು ಬಂದದ್ದೂ ಆಯಿತು. ಒಬ್ಬೊಬ್ಬರೇ ತಮ್ಮ ಸಮಸ್ಯೆಯೊಂದಿಗೆ ಹೋಗಿದ್ದರೆ ಈ ಕೆಲಸ ಬಹುಶಃ ಆಗುತ್ತಲೇ ಇರಲಿಲ್ಲ.

ಮಹಿಳೆಯರನ್ನು ಕಾಡುವ ಅತ್ಯಂತ ಗಂಭೀರವಾದ ಸಮಸ್ಯೆ ಎಂದರೆ ಕುಡಿತ ಎಂಬ ವಿಚಾರವನ್ನು ಬಹುಶಃ ಯಾರೂ ಅಲ್ಲಗಳೆಯಲಾರರು. ಹಳ್ಳಿಗಳ ಒಂದೊಂದು ಕೇರಿಯಲ್ಲಿಯೂ

ಮುಕ್ಕಾಲುಭಾಗ ಮನೆಗಳಲ್ಲಿ ಕುಡಿತದ ಸಮಸ್ಯೆ ಇದ್ದೇ ಇದೆ. ಹೀಗಾಗಿ ಮಹಿಳೆಯರು, ಮಕ್ಕಳು, ಮನೆಯ ಹಿರಿಯರು ಬಯಸುವುದು ಒಂದನ್ನೇ, ಸಾರಾಯಿ ಅಂಗಡಿಗಳು ಮುಚ್ಚಬೇಕು ಎಂದು. ಕುಡಿತದ ಈ ಸಮಸ್ಯೆಯಿಂದ ರೋಸಿ ಹೋದ ಖಾನಾಪುರ ತಾಲೂಕಿನ ಬೀಡಿ ಎಂಬ ಗ್ರಾಮದ ಮಹಿಳೆಯರು ಸರಕಾರಿ ಲೈಸೆನ್ಸ್ ಹೊಂದಿದ, ರಾಜಾರೋಷವಾಗಿ ಸಾರಾಯಿ ಮಾರುವ ಅಂಗಡಿ ಮಾಲೀಕರಿಗೇ ಸವಾಲೆಸೆದರು. ಗ್ರಾಮ ಪಂಚಾಯತಿಗೆ ಹೋಗಿ ವಿಶೇಷ ಗ್ರಾಮಸಭೆ ಕರೆಯಬೇಕೆಂದು ಒತ್ತಾಯಿಸಿದರು. ಚುನಾವಣೆಯಲ್ಲಿ ರಾಜಕಾರಣಿಗಳು ಪ್ರಚಾರ ಮಾಡುವಂತೆ ಮಹಿಳೆಯರು ಗುಂಪುಗಳು ಮನೆಮನೆಗೆ ಭೇಟಿಕೊಟ್ಟು, ವಿಶೇಷ ಗ್ರಾಮಸಭೆಯ ಮಹತ್ವವನ್ನು ತಿಳಿಸಿ ಸಾವಿರಾರು ಸಂಖ್ಯೆಯಲ್ಲಿ ಜನ ಹಾಜರಾಗುವಂತೆ ಮಾಡಿ ವಿಶೇಷ ಗ್ರಾಮಸಭೆಯನ್ನು ಸಾಧ್ಯವಾಗಿಸಿದರಲ್ಲದೇ ಸರ್ವಾನುಮತದಿಂದ, ಸಾರಾಯಿ ಮಾರಾಟ ಮಾಡುವ ಅಂಗಡಿಗಳ ಲೈಸೆನ್ಸ್ ರದ್ದಾಗುವಂತೆ ನೋಡಿಕೊಂಡರು. ಒಟ್ಟಾದರೆ ತಮಗೆ ಯಾವುದೂ ಅಸಾಧ್ಯವಲ್ಲ ಎಂಬುದನ್ನು ತೋರಿಸಿಕೊಟ್ಟರು. ಅದರೆ ಈ ಒಗ್ಗೂಡುವಿಕೆ ಸುಲಭ ಸಾಧ್ಯವೆ?

ಮದುವೆಯಾದೊಡಯೇ ಹುಟ್ಟಿದ ಮನೆಗೆ ಹೊರತಾಗುವ, ಕೊಟ್ಟ ಮನೆ ಹೇಗಿದ್ದರೂ ಸಹಿಸಿಕೊಂಡೇ ಬಾಳಬೇಕಾಗುವ ಗ್ರಾಮೀಣ ಮಹಿಳೆಗೆ ಸಂಘಟನೆ ಕಷ್ಟದ ಸಮಯದಲ್ಲಿ ನಂಬ ಬಹುದಾದ ಆಸರೆ. ಆದರೆ ಕಷ್ಟ ಬಂದಾಗ ಮಾತ್ರ ಸಂಘಟನೆಯತ್ತ ಮುಖ ಮಾಡುವುದು ಇಂದಿನ ಪರಿಪಾಠವಗಿದೆ. ತನ್ನಂತೆ ನೋವು ಅನುಭವಿಸುವ ಅನೇಕ ಮಹಿಳೆಯರಿಗೆ ಧೈರ್ಯ ತುಂಬುವ ಆಕರವಾಗಿರಬೇಕಾದರೆ ಸಂಘಟನೆ ಮೊದಲು ಜೀವಂತವಾಗಿರಬೇಕು. ಈ ಉದ್ದೇಶಕ್ಕಾಗಿ ಮಹಿಳೆಯರು ಆಗಾಗ ಒಟ್ಟಿಗೆ ಸೇರಿ ತಮ್ಮ ಸಮಸ್ಯೆಗಳ ಕುರಿತು ಚರ್ಚಿಸುವುದೋ, ಹೊಸ ವಿಷಯಗಳನ್ನು ತಿಳಿದುಕೊಳ್ಳುವುದೋ ಸಾಧ್ಯವಾಗಬೇಕು. ಸಮಸ್ಯೆ ಬರುವುದೇ ಇಲ್ಲಿ. ಸಂತೆ ಮಾಡುವುದಕ್ಕೋ, ಪರಿಚಿತರ ಮದುವೆಗೆ ಹೋಗುವುದಕ್ಕೋ ಮನೆಯಲ್ಲಿ ಅಷ್ಟೊಂದು ನಿಬಂಧನೆಗಳು ಇರಲಿಕ್ಕಿಲ್ಲ. ಆದರೆ ಸಂಘಟನೆಯಂಥ ಉದ್ದೇಶಕ್ಕಾಗಿ ಮಹಿಳೆಯರು ಮನೆ ಬಿಟ್ಟು ಹೊರಗೆ ಬಂದರೆ ಅದು ಮನೆಯ ಗಂಡಸರಿಗೆ, ಹಿರಿಯರಿಗೆ ಇಷ್ಟವಾಗುವುದಿಲ್ಲ. ಎಲ್ಲಿ ಅವಳ ಮೇಲಿನ ತಮ್ಮ ಹಿಡಿತ ಸಡಿಲಗೊಳ್ಳುತ್ತದೆಯೋ ಎಂಬ ಅಳುಕು ಅವರಲ್ಲಿ ಇದ್ದೇ ಇರುತ್ತದೆ. ಎಸ್.ಡಿ.ಎಮ್.ಸಿ ಸದಸ್ಯರಿಗಾಗಿ ನಮ್ಮ ಒಕ್ಕೂಟ ತರಬೇತಿಯೊಂದನ್ನು ನಡೆಸುತ್ತಿದ್ದಾಗ ತರಬೇತಿಗೆ ಬಂದ ಮಹಿಳೆಯೊಬ್ಬರು ತುಂಬ ಚಡಪಡಿಸುತ್ತಿದ್ದರು. ಕಾರಣ ಕೇಳಿದಾಗ, "ತಾನು ಮನೆಯಿಂದ ಹೊರಗೆ ಕಾಲಿಟ್ಟರೆ ಸಾಕು, ಗಂಡ ಅನುಮಾನ ಪಡಲು ಶುರು ಮಾಡುತ್ತಾನೆ. ಈಗ ಸದ್ಯ ಹೊರಗಡೆ ಬಂದು ನಿಂತಿದ್ದಾನೆ, ತಾನು ಹೋಗದೇ ಇದ್ದರೆ ಸಂಜೆ ಕುಡಿದು ಹೊಡೆಯುವುದು ಗ್ಯಾರಂಟಿ, ಆ ಹೊಡೆತವನ್ನು ತಪ್ಪಿಸಿಕೊಳ್ಳಬೇಕಾದರೆ ನಾನೀಗ ಮನೆಗೆ ಹೋಗಲೇ ಬೇಕು" ಎಂದು ಹೇಳಿದರು.

ಪರಿಸ್ಥಿತಿ ಹೀಗಿರುವಾಗ ಸಂಘಟನೆ ಕಟ್ಟುವವರು ಬೇರೆ ಬೇರೆ ದಿಕ್ಕುಗಳಿಂದ ಕೆಲಸ ಮಾಡುವ ಅಗತ್ಯತೆ ಇದೆ. ಶತಮಾನಗಳಿಂದ ಗಂಡು ಹೆಚ್ಚು, ಹೆಣ್ಣು ಕಡಿಮೆ ಎಂಬ ನಂಬಿಕೆಯಲ್ಲೇ ನಡೆದುಕೊಂಡು ಬಂದಿರುವ ಸಮಾಜದಲ್ಲಿ ಗಂಡು ಸಹಜವಾಗಿಯೇ ತನ್ನ ಹೆಚ್ಚುಗಾರಿಕೆಯನ್ನು ತೋರಿಸುತ್ತಾನೆ. ಹೆಂಡತಿ ತಾನು ಹಾಕಿದ ಗೆರೆಯನ್ನು ದಾಟಬಾರದೆಂದು ಬಯಸುತ್ತಾನೆ. ಹೀಗಾಗಿ ಮೊದಲು ಗಂಡಸರೊಂದಿಗೆ ಕುಳಿತು ಚರ್ಚಿಸುವ ಅಗತ್ಯತೆ ಇದೆ. ಹೇಗೆ ಮಹಿಳೆಯೂ ಸಮಾನ ಸ್ಥಾನಮಾನವಿರುವ ಕುಟುಂಬದ ಸದಸ್ಯೆ ಎಂಬ ವಿಚಾರವನ್ನು ಮನಗಾಣಿಸುವ ಅವಶ್ಯಕತೆ ಇದೆ.

ಮಹಿಳೆಯೂ ತನ್ನನ್ನು ತಾನು ಮೊದಲು ಅರಿತುಕೊಳ್ಳಬೇಕಿದೆ. ಕುಟುಂಬದಲ್ಲಿ, ಸಮಾಜದಲ್ಲಿ ತನ್ನ ಸ್ಥಾನ ಯಾವ ಸ್ತರದಲ್ಲಿದೆ, ಇದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಬೇಕಿದೆ. ಅನೇಕ ಮಹಿಳೆಯರು ತಮ್ಮ ಮೇಲಾಗುವ ಶೋಷಣೆಯನ್ನು ಶೋಷಣೆ ಎಂದು ಪರಿಗಣಿಸುವುದೇ ಇಲ್ಲ. 'ಗಂಡ ಒಂದು ಮಿತಿಯಲ್ಲಿ ಹೊಡೆದರೆ ತಪ್ಪೇನಿಲ್ಲ, ತಪ್ಪು ಮಾಡಿದ್ದಕ್ಕೆ ತಾನೆ ಅವನು ಹೊಡೆಯುವುದು' ಎಂಬ ಮಾತು ಬಹಳ ಸಹಜವಾಗಿಯೇ ಅವರ ಬಾಯಿಂದ ಬರುತ್ತದೆ. ಈ ತಪ್ಪುಗಳು ಎಂಥವೆಂದರೆ ಕರೆದಾಕ್ಷಣ ಗಂಡನಿದ್ದಲ್ಲಿಗೆ ಹೋಗದೇ ಇರುವುದು, ಕೇಳಿದ ತಕ್ಷಣ ನೀರು ಕೊಡದೇ ಇರುವುದು, ಅಡುಗೆ ರುಚಿಯಾಗಿಲ್ಲದೇ ಇರುವುದು ಇತ್ಯಾದಿ. ಈ ಮನೋಭಾವನೆಯಿಂದ ಹೊರಬಂದು ತಾನೂ ಒಬ್ಬ ವ್ಯಕ್ತಿ, ಕುಟುಂಬವನ್ನು ಮುನ್ನಡೆಸುವಲ್ಲಿ ತನ್ನದೂ ಸಮ ಪಾಲು ಇದೆ, ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ತನಗೆ ಸಾಮರ್ಥ್ಯವಿದೆ ಎಂಬುದನ್ನು ಮಹಿಳೆ ಅರಿಯಬೇಕಿದೆ.

ತಾವು ಸಬಲರಾಗಬೇಕಾದರೆ ಒಗ್ಗೂಡುವಿಕೆಯ ಅಗತ್ಯತೆಯನ್ನು ಮನಗಂಡು ಸಂಘಟನೆ ಸೇರುವುದು ಮಹಿಳೆಯರ ದೃಷ್ಟಿಯಿಂದ ಒಂದು ಮಹತ್ವದ ಹೆಜ್ಜೆಯೇ ಸರಿ. ಇದರ ಜೊತೆಗೇ ಸಾಕಷ್ಟು ಪ್ರಮಾಣದಲ್ಲಿ ಹೊರಪ್ರಪಂಚದ ಜ್ಞಾನವನ್ನು ಪಡೆದುಕೊಳ್ಳುವುದೂ ತುಂಬ ಮಹತ್ವವಾದದ್ದು. ಮಹಿಳಾ ಸಂಬಂಧಿತ ಕಾನೂನುಗಳ ಕುರಿತು ಮಾಹಿತಿಯನ್ನು ಪಡೆಯುವುದು ಅವಶ್ಯಕ. ಹಾಗೆಯೇ ಮಾತನಾಡುವ ಧೈರ್ಯವನ್ನೂ ಬೆಳೆಸಿಕೊಳ್ಳಬೇಕು. ಕೌಟುಂಬಿಕ ದೌರ್ಜನ್ಯದ ತಕರಾರುಗಳನ್ನು ದಾಖಲಿಸಲು ಪೋಲೀಸ್ ಠಾಣೆಗೆ ಹೋದರೆ ಪೋಲೀಸರು ಎಫ್.ಐ.ಆರ್ ಮಾಡದೇನೇ ಮಹಿಳೆಯರನ್ನು ಸಾಗಹಾಕುವುದೇ ಜಾಸ್ತಿ. ಠಾಣೆಯಲ್ಲಿರುವ ಪಿ.ಎಸ್.ಐ ಯನ್ನು ಭೇಟಿಯಾಗಲೂ ಬಿಡುವುದಿಲ್ಲ. ಇಂಥ ಸಂದರ್ಭಗಳಲ್ಲಿ ಪಟ್ಟು ಬಿಡದೇ ಎಫ್.ಐ.ಆರ್ ಮಾಡಿಸುವ ಸ್ಥೈರ್ಯವನ್ನು ಮಹಿಳೆಯರು ಬೆಳೆಸಿಕೊಳ್ಳಬೇಕು. ಇದೆಲ್ಲದಕ್ಕೆ ನಿರಂತರ ತರಬೇತಿಗಳನ್ನು ಪಡೆಯಬೇಕಾಗುತ್ತದೆ. ಕುಟುಂಬದ ಜವಾಬ್ದಾರಿಗಳನ್ನು ಸ್ವಲ್ಪ ಬದಿಗಿಟ್ಟು ತರಬೇತಿಗಳಿಗೆ ಹಾಜರಾಗುವುದೇ ಮಹಿಳೆಯರ ಮುಂದಿರುವ ದೊಡ್ಡ ಸವಾಲು. ಇದಲ್ಲದೆ ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚಿನಂಶ ದಿನಗೂಲಿ ಮಾಡಿ ಜೀವನ ಸಾಗಿಸುವವರಾಗಿರುತ್ತಾರೆ. ಆ ದಿನದ ಕೂಲಿಯನ್ನು ಬಿಟ್ಟು ತರಬೇತಿಗೆ ಬರುವುದು ಅವರಿಗೆ ನಷ್ಟದ ವ್ಯವಹಾರವೆನಿಸುತ್ತದೆ. ಸಾಮಾನ್ಯವಾಗಿ ಬೇರೆ ಬೇರೆ ಗ್ರಾಮಗಳಿಂದ ಬಂದು ಒಂದೆಡೆ ಸೇರಿ ಮಹಿಳೆಯರು ತರಬೇತಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ವಾಹನ ಸೌಲಭ್ಯಗಳೇ ಇಲ್ಲದ ಗ್ರಾಮಗಳಿಂದ ಬರುವುದು ಕಷ್ಟವಾಗುತ್ತದೆ. ಇಂಥ ಸಂದರ್ಭಗಳಲ್ಲಿ ಕುಟುಂಬದ ಸಹಕಾರ ಇದ್ದರೆ ಮಾತ್ರ ದಿನ ನಿತ್ಯದ ಸಮಸ್ಯೆಗಳನ್ನು ಪಕ್ಕಕ್ಕೆ ತಳ್ಳಿ ಮುಂದೆ ಬರಲು ಮಹಿಳೆಯರಿಗೆ ಸಾಧ್ಯವಾಗುತ್ತದೆ. ಆದರೆ ಶತಮಾನಗಳಿಂದಲೂ ಮಹಿಳೆ ಮನೆಯ ಒಳಗೇನೇ ಇರಬೇಕಾದವಳು, ಕೌಟುಂಬಿಕ ಜವಾಬ್ದಾರಿಯೇ ಅವಳ ಪರಮೋಚ್ಚ ಕರ್ತವ್ಯ ಎಂದು ಬಿಂಬಿಸಲಾದ್ದರಿಂದ ಹೊಸ್ತಿಲು ದಾಟಿ ಹೊರಬರುವುದೇ ಅವಳಿಗೆ ಕಷ್ಟವಾಗಿದೆ. ಆದರೆ ಹೊರಬರದೆ ವಿಧಿಯಿಲ್ಲ.

ತನ್ನನ್ನು ತಾನು ಅರಿತುಕೊಳ್ಳುತ್ತ, ಸಮಾಜದಲ್ಲಿ, ಕುಟುಂಬದಲ್ಲಿ ಬೇರೂರಿರುವ ಮಹಿಳಾ ವಿರೋಧಿ ನಂಬಿಕೆಗಳನ್ನು ಪ್ರಶ್ನಿಸುತ್ತಲೇ ಸಂಘಟನೆಯತ್ತ ಸಾಗುವುದು ಗ್ರಾಮೀಣ ಮಹಿಳೆಯರ ಇಂದಿನ ತುರ್ತು ಅವಶ್ಯಕತೆಯಾಗಿದೆ.●

ಅನ್ವೇಷಿಯ ಟಿಪ್ಪಣಿ

– ಸುಮನಸ ಕೌಲಗಿ

ಇತ್ತೀಚಿಗೆ ಯಾದಗಿರಿ ಜಿಲ್ಲೆಯ ಕೊಡೆಕಲ್ ನಿಂದ ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ವರಗೆ ನಡೆದ ೩೦೦ ಕಿಮಿ ಪಾದಯಾತ್ರೆಯ ಅನುಭವವನ್ನು ಸುಮನಸ ಕೌಲಗಿ ಇಲ್ಲಿ ಹಂಚಿ ಕೊಂಡಿದ್ದಾರೆ. ಗ್ರಾಮ ಸೇವಾ ಸಂಘವು ಕಾಯಕ ಜೀವಿಗಳ ಏಕತೆಯ ಚಳುವಳಿಯ ಭಾಗವಾಗಿ ಈ ಪಾದಯಾತ್ರೆಯನ್ನು ಏರ್ಪಡಿಸಿತ್ತು.

ಈ ಲೇಖನಕ್ಕೆ ಎರಡು ಆಯಾಮಗಳಿವೆ; ಮೊದಲನೆಯದು, ಕಳೆದ ತಿಂಗಳು ನಡೆದ ಕಾಯಕ ಜೀವಿಗಳ ಏಕತೆಯ ಚಳವಳಿಯ ಭಾಗವಾದ ಪಾದಯಾತ್ರೆಯ ಆಶಯ ಮತ್ತು ಎರಡನೆಯದು, ಆ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ನನಗೆ ಆದ ಅನುಭವ. ಇವುಗಳ ಮೂಲಕ ಆ ಪಾದಯಾತ್ರೆಯಿಂದ ಸಮಾಜದ ಮೇಲೆ ಹಾಗೂ ನನ್ನ ವೈಯಕ್ತಿಕ ಬದುಕಿನ ಮೇಲಾದ ಪರಿಣಾಮಗಳು, ಅವುಗಳೆರಡರ ನಡುವಿನ ಸಂಬಂಧವನ್ನು ಬಿಡಿಸಿಡಲು ಇಲ್ಲಿ ಪ್ರಯತ್ನಿಸಿದ್ದೇನೆ.

ಈ ಚಳವಳಿಯು ಒಂದು ಮಹತ್ವದ ಆಶಯವನ್ನು ಹೊಂದಿದೆ. ಇತ್ತೀಚೆಗೆ ನಂಬಲರ್ಹವಾದ ಸಂಸ್ಥೆಯೊಂದು ಬಿಡುಗಡೆ ಮಾಡಿದ ಅಸಮಾನತೆ ವರದಿಯಲ್ಲಿ ನಮ್ಮ ದೇಶದ ಶೇ. ೧ ಜನರಲ್ಲಿ ದೇಶದ ಒಟ್ಟು ಉತ್ಪಾದನೆಯ ಶೇ.೭೩ ಆದಾಯ ಸೇರಿದೆ ಎಂಬ ಸತ್ಯವನ್ನು ಹೊರಹಾಕಿದೆ. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ ಮತ್ತು ಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. ದುರಂತವೆಂದರೆ, ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಶೇ.೬೦ ರಷ್ಟಿರುವ ಕೈ ಆಧಾರಿತ ಉತ್ಪಾದಕರಾಗಿರುವ ರೈತರು, ಕುಂಬಾರರು, ಚಮ್ಮಾರರು, ನೇಕಾರರು ಇನ್ನಿತರ ಕೃಷಿ ಆಧಾರಿತ ಸಮುದಾಯಗಳು ಬಡತನದಲ್ಲೇ ಉಳಿದಿವೆ.

ಕೈ ಉತ್ಪನ್ನಗಳನ್ನು ಗಂಭೀರವಾಗಿ ಪರಿಗಣಿಸದ ಸರ್ಕಾರಗಳು ಪ್ರತಿ ಸಲವೂ ಭಿಕ್ಷೆಯ ರೂಪದಲ್ಲಿ ಸಾಲವನ್ನು ಮನ್ನಾ ಮಾಡಿ, ಅಲ್ಪಾವಧಿ ಪರಿಹಾರ ಕೊಡುತ್ತ ಅವರ ಸ್ವಗೌರವವನ್ನು ಕಸಿಯುತ್ತಿದೆ. ಈ ಪಾದಯಾತ್ರೆಯ ಮೂಲಕ ಸರ್ಕಾರ ಹಾಗೂ ಗ್ರಾಹಕರ ಮುಂದೆ ಕೈಉತ್ಪನ್ನಗಳಿಗೆ ಸರಿಯಾದ ಬೆಲೆಯನ್ನು ನೀಡುವಂಥ ಬೇಡಿಕೆಯನ್ನು ಮುಂದಿಡಲಾಗಿದೆ. ಇದರಿಂದ ಬಹುಸಂಖ್ಯಾತರಾಗಿರುವ ಕೈಉತ್ಪಾದಕರಿಗೆ ಶಾಶ್ವತ ಪರಿಹಾರವು ದೊರಕಿ ನೆಮ್ಮದಿಯ ಜೀವನವನ್ನು ನಡೆಸುವಂತಾಗುತ್ತದೆ. ಇದರಿಂದ ಸಾಮಾಜಿಕ, ಆರ್ಥಿಕ ಅಸಮಾನತೆ ಹಾಗೂ ಪರಿಸರ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಬಗೆಹರಿಸಲು ಸಾಧ್ಯವಾಗುತ್ತದೆ.

ಇನ್ನೊಂದು ಬಹುಮುಖ್ಯ ಅಂಶವೆಂದರೆ, ಈ ಚಳವಳಿಯು ಕೇವಲ ಭೌತಿಕ ಆಯಾಮವನ್ನು ಹೊಂದಿರದೆ ಆಧ್ಯಾತ್ಮಿಕ ಆಯಾಮವನ್ನು ಕೂಡ ಹೊಂದಿರುವುದು ವಿಶೇಷ. ಹೆಚ್ಚುತ್ತಿರುವ ಸಾಮಾಜಿಕ ಅಸಮಾನತೆ ಹಾಗೂ ಪರಿಸರ ಸಮಸ್ಯೆಗಳಿಗೆ ಬಹುಮುಖ್ಯ ಕಾರಣವಾಗಿರುವುದು ಆಧ್ಯಾತ್ಮಿಕತೆಯ ಅಭಾವದಿಂದ ಉಂಟಾಗಿರುವ ನೈತಿಕತೆಯ ಕೊರತೆ. ಈ ಚಳವಳಿಯು ಶತಮಾನಗಳ ಹಿಂದಿನ ಭಕ್ತಿ ಹಾಗೂ ಕಾಯಕ ಚಳವಳಿಗಳನ್ನು ಪುನರುಜ್ಜೀವಗೊಳಿಸಿ, ಕೈಉತ್ಪನ್ನಗಳಿಗೆ ಬೆಲೆ ಸಿಗುವಂತೆ ಮಾಡುವುದರ ಮೂಲಕ ಭೌತಿಕ ಹಾಗೂ ಆಧ್ಯಾತ್ಮಿಕ ಏಕತೆಯನ್ನು ಗಟ್ಟಿಗೊಳಿಸಿ ಸಮಾನತೆಯ ಮತ್ತು ಸುಸ್ಥಿರತೆಯ ದೇಶವನ್ನಾಗಿಸುವೆಡೆಗಿನ ಮೊದಲನೇ ಹೆಜ್ಜೆ ಎಂದರೆ ತಪ್ಪಾಗಲಾರದು.

ಈ ಪಾದಯಾತ್ರೆಯನ್ನು ಗ್ರಾಮ ಸೇವಾ ಸಂಘವು ಆಯೋಜಿಸಿತ್ತು. ರಂಗಕರ್ಮಿ, ಸುಸ್ಥಿರ ಬದುಕಿಗಾಗಿ ಚಳವಳಿ ನಿರತ ಪ್ರಸನ್ನ ಅವರು ನೇತೃತ್ವ ವಹಿಸಿದ್ದರು. ಪಾದಯಾತ್ರೆಯು ೧೬ ನೇ ಶತಮಾನದ ಶರಣರಾದ ಶ್ರೀ ಮಂಟೇಸ್ವಾಮಿಗಳು ಕ್ರಮಿಸಿದ ಜಾಗಗಳಲ್ಲೇ ನಡೆದು ಸಾಗಿತು. ಒಟ್ಟು ೩೦೦ ಕಿಮೀ ಉದ್ದದ ಪಾದಯಾತ್ರೆಯು ಯಾದಗಿರಿ ಜಿಲ್ಲೆಯ ಕೊಡೇಕಲ್ಲಿನಿಂದ ಹೊರಟು ಹಂಪಿ ಮಾರ್ಗವಾಗಿ ಕೊಟ್ಟೂರಿಗೆ ಸೇರಿತು. ಗುರುವಾರ (ಫೆ.೧೫) ಕೊಟ್ಟೂರಿನಲ್ಲಿ ಒಂದು ದೊಡ್ಡ ಸಮಾವೇಶದೊಂದಿಗೆ ಯಾತ್ರೆ ಮುಕ್ತಾಯಗೊಂಡಿತು. ಕೊಟ್ಟೂರು ಖಾದಿ ಬಟ್ಟೆ ತಯಾರಿಕೆಯಲ್ಲಿ ಹೆಸರುವಾಸಿಯಾದ ಊರು. ಮನೆಮನೆಯಲ್ಲಿ ಇನ್ನೂ ಕೈನೇಯ್ಗೆ ಉಳಿದುಕೊಂಡಿರುವ ಊರಷ್ಟೇ ಅಲ್ಲ, ಕಾಯಕ ಹಾಗೂ ಭಕ್ತಿ ಚಳವಳಿಗಳು ನಡೆದ ಸ್ಥಳ. ಕಡೆಯ ದಿನ ಹ್ಯಾಳ್ಯ ಗ್ರಾಮದಿಂದ ಕೊಟ್ಟೂರಿಗೆ ೩ ಕಿಮೀ ಪಾದಯಾತ್ರೆಯಲ್ಲಿ ನಟ ಪ್ರಕಾಶ್ ರೈ, ಲೇಖಕ ಕುಂ ವೀರಭದ್ರಪ್ಪ ಅವರು ನಮ್ಮ ಜೊತೆಗೂಡಿದ್ದರು. ಸಮಾವೇಶದಲ್ಲಿ ಕೈಉತ್ಪನ್ನಗಳಿಗೆ ಬೆಲೆಯನ್ನು ಕೊಡುವುದರ ಮಹತ್ವವನ್ನು ತಿಳಿಸಲಾಯಿತು. ಮುಂಬರುವ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಕೈಉತ್ಪಾದಕರ ಹಿತದ ಕುರಿತು ಏನು ಭರವಸೆ ನೀಡುತ್ತವೆ, ಏನು ಮಾಡುತ್ತವೆ ಎನ್ನುವ ಪ್ರಶ್ನೆಗಳ ಸಹಿತ ಕೆಲವು ಬೇಡಿಕೆಗಳನ್ನು ಮುಂದಿಡಲಾಯಿತು.

ಈಗ ನನ್ನ ವೈಯಕ್ತಿಕ ಅನುಭವದ ಕಡೆಗೆ ಬರೋಣ. ೨೦೧೬ ರಲ್ಲಿ ನಂಜನಗೂಡು ತಾಲೂಕು ಬದನವಾಳು ಗ್ರಾಮದಲ್ಲಿ ನಡೆದ ಸುಸ್ಥಿರ ಬದುಕಿನ ಪರ ಪಾದಯಾತ್ರೆಯಲ್ಲಿ ಮೊದಲು ಭಾಗವಹಿಸಿದ್ದ ನನಗೆ, ಮತ್ತೊಂದು ಆ ರೀತಿಯ ಅನುಭವಕ್ಕಾಗಿ ಕಾಯುತ್ತಿದ್ದೆ. ಏಕೆಂದರೆ, ಹಿಂದೆಂದೂ ಶಾಲಾ ಕಾಲೇಜಿನಲ್ಲಿ ಕಲಿಯದ ಜೀವನದ ಪಾಠಗಳನ್ನು ನನ್ನ ಮೊದಲನೆಯ ಪಾದಯಾತ್ರೆಯಲ್ಲಿ ಕಲಿತಿದ್ದೆ. ಓಟದ ಕುದುರೆಯಂತೆ ಹೆಚ್ಚುತ್ತಿರುವ ಜೀವನದ ವೇಗದಲ್ಲಿ, ಎತ್ತಿನಗಾಡಿಯಂತೆ ನಿಧಾನವಾಗಿ ಚಲಿಸುವ ಪಾದಯಾತ್ರೆಯ ಪ್ರಸ್ತುತತೆಯ ಬಗ್ಗೆ ನಮಗೆ ಪ್ರಶ್ನೆ ಕಾಡಬಹುದು. ಆದರೆ, ನನಗೆ ಪಾದಯಾತ್ರೆಯು ಹಿಂದೆಂದಿಗಿಂತಲೂ ಪ್ರಸ್ತುತವಾಗಿ ಕಾಣಿಸುತ್ತಿದೆ. ಏಕೆಂದರೆ, ಪಾದಯಾತ್ರೆಯು ನಮ್ಮ ಜೀವನದ ವೇಗವನ್ನು ಕಡಿಮೆಗೊಳಿಸುವ ಮೂಲಕ ನಮ್ಮನ್ನು ವಾಸ್ತವತೆಗೆ ಕರೆದೊಯ್ದು ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ.

ಕಾರಣಾಂತರಗಳಿಂದ ಕಾಯಕ ಜೀವಿಗಳ ಏಕತೆಯ ಪಾದಯಾತ್ರೆಯಲ್ಲಿ ಪ್ರಾರಂಭದಿಂದ ಭಾಗವಹಿಸಲಾಗದೆ, ನನ್ನ ಸ್ನೇಹಿತರೊಡನೆ ಪಾದಯಾತ್ರೆಯ ಕಡೆಯ ಅರ್ಧ ಭಾಗಕ್ಕೆ ಸೇರಿಕೊಂಡೆ. ನಾವು ಸೇರುವಷ್ಟರಲ್ಲಿಯೇ ಪಾದಯಾತ್ರೆಯು ಹೊಸಪೇಟೆ ಊರನ್ನು ತಲುಪಿತ್ತು. ಆಗಲೇ ಪಾದಯಾತ್ರೆಯ ಅನುಭವವಿದ್ದ ನನಗೆ ಯಾವುದೇ ರೀತಿಯ ಆತಂಕಗಳಿರಲಿಲ್ಲ.

ಪಾದಯಾತ್ರೆಯು ದಿನ ಬೆಳಗ್ಗೆ ೫.೩೦ ಕ್ಕೆ ಸರಿಯಾಗಿ ಪ್ರಾರ್ಥನೆಯೊಂದಿಗೆ ಶುರುವಾಗುತ್ತಿತ್ತು. ೬ ಘಂಟೆಗೆ ಸರಿಯಾಗಿ ನಡೆಯಲು ಪ್ರಾರಂಭಿಸುತ್ತಿದ್ದೆವು. ಬಿಸಿಲು ಹೆಚ್ಚುವ ಮೊದಲೇ ಅರ್ಧ ದಾರಿಯನ್ನು ಕ್ರಮಿಸಿ ಉಪಹಾರವನ್ನು ಮುಗಿಸಿ ಹಳ್ಳಿಗರನ್ನು, ಅದರಲ್ಲೂ ಕೈಉತ್ಪಾದಕರನ್ನು ಮಾತನಾಡಿಸಲು ಹೋಗುತ್ತಿದ್ದೆವು. ಮಧ್ಯಾಹ್ನ ಊಟವನ್ನು ಮಾಡಿ ಸ್ವಲ್ಪ ವಿಶ್ರಾಂತಿಯನ್ನು ಪಡೆದು ಮತ್ತೆ ಸಂಜೆ ಪುನಃ ನಡೆಯುತ್ತಿದ್ದೆವು. ರಾತ್ರಿ ಹಳ್ಳಿಯನ್ನು ಸೇರಿ ಅಂದಿನ ಅನುಭವವನ್ನು ಹಂಚಿಕೊಂಡು, ಊಟಮಾಡಿ ಮಲಗುತ್ತಿದ್ದೆವು.

ಪಾದಯಾತ್ರಿಗಳು ಕರ್ನಾಟಕದ ವಿವಿಧ ಭಾಗಗಳಿಂದ ಬಂದಿದ್ದರು. ಒಂದಿಷ್ಟು ಜನ ಹಳ್ಳಿಗರಿದ್ದರೆ ಇನ್ನೊಂದಿಷ್ಟು ಜನ ನಗರವಾಸಿಗಳು. ನೇಕಾರರು, ನಾಟಕಕಾರರು, ಹೋರಾಟಗಾರರು, ಎಂಜಿನಿಯರ್ಗಳು, ವೈದ್ಯರು, ವಕೀಲರು, ಪ್ರಾಧ್ಯಾಪಕರು, ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ಜನರು ಯಾತ್ರೆಯ ಭಾಗವಾಗಿದ್ದರು. ಈ ರೀತಿಯ ವಿಶಿಷ್ಟ ಗುಂಪಿನೊಂದಿಗೆ ಹೋಗುವುದು ಒಂದು ಅದ್ಭುತ ಅನುಭವವಾಗಿತ್ತು. ಯಾವುದೇ ಒಂದು ವಿಚಾರವನ್ನು ಪಾದಯಾತ್ರಿಗಳು ತಮ್ಮ ವಿವಿಧ ಅನುಭವಗಳ ಮೂಲಕ ವಿಶ್ಲೇಷಿಸಿ ಹಂಚಿಕೊಳ್ಳುತ್ತಿದ್ದರು. ಇದರಿಂದ ನನಗೆ ಪ್ರಪಂಚವನ್ನು ಹತ್ತಾರು ದೃಷ್ಟಿಕೋನಗಳಲ್ಲಿ ನೋಡಲು ಸಾಧ್ಯವಾಯಿತು. ಎಷ್ಟೋ ಸಲ ಒಂದು ಹಳ್ಳಿಗೆ ಹೋದಾಗ ಕೆಲವು ವಿಚಾರಗಳು ಕೆಲವೊಬ್ಬರಿಗೆ ಅದ್ಭುತವಾಗಿ ಕಂಡರೆ, ಕೆಲವರಿಗೆ ಅದೇ ವಿಚಾರವು ಸಾಮಾನ್ಯವಾಗಿ ಕಾಣುತ್ತಿತ್ತು. ಕೆಲವರಿಗೆ ಹಳ್ಳಿಯ ಅರ್ಥಶಾಸ್ತ್ರದ ಬಗ್ಗೆ ಕುತೂಹಲವಿದ್ದರೆ ಕೆಲವರಿಗೆ ಹಳ್ಳಿಗರ ವೈಯಕ್ತಿಕ ಕತೆಗಳು ಆಸಕ್ತಿದಾಯಕವಾಗಿ ಕಾಣುತ್ತಿತ್ತು. ಕೆಲವರಿಗೆ ಸರ್ಕಾರದ ಕಾನೂನುಗಳು ಹಾಗೂ ಅವುಗಳ ಪರಿಣಾಮ ಹಳ್ಳಿಜೀವನದ ಮೇಲೆ ಹೇಗೆ ಬೀರಿದೆ ಎಂಬುದು ಕಾಣಿಸುತ್ತಿದ್ದರೆ, ಇನ್ನೊಂದಿಷ್ಟು ಜನರು ಅಲ್ಲಿಯ ಸಂಸ್ಕೃತಿಯ ಬಗ್ಗೆ ಆಳವಾಗಿ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದರು. ಪಾದಯಾತ್ರಿಗಳು ತಮ್ಮ ಒಳನೋಟಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವಾಗ ಎಲ್ಲ ವಿಚಾರಗಳು ಹೇಗೆ ಒಂದಕ್ಕೊಂದು ಸಂಬಂಧವನ್ನು ಹೊಂದಿದೆ ಎಂಬುದು ನಮ್ಮ ಅರಿವಿಗೆ ಬಂತು. ಸಂಶೋಧಕರು, ಕಾನೂನನ್ನು ಮಾಡುವವರು, ಸಮಾಜ ಸುಧಾರಕರು, ಪರಿಸರವಾದಿಗಳು, ಪತ್ರಕರ್ತರು, ಹೀಗೆ ಬಹುಪಾಲು ಜನರು ಯಾವುದೋ ಒಂದು ವಿಚಾರವನ್ನು ತೆಗೆದುಕೊಂಡು ಸಮಾಜದಲ್ಲಿನ ಕ್ಲಿಷ್ಟ ಸಂಬಂಧವನ್ನು ಮರೆತು ಅಥವಾ ವಿಚಾರಗಳನ್ನು ಸಮಗ್ರವಾಗಿ ನೋಡದೆ ಎಂತಹ ಅಪಾಯಕಾರಿ ಕೆಲಸವನ್ನು ಮಾರುತ್ತಿದ್ದಾರೆ ಎಂಬ ಸತ್ಯದ ಅರಿವು ನನಗಾಯಿತು.

"ಪ್ರಪಂಚವು ಒಬ್ಬರೊಬ್ಬರ ಶ್ರಮದ ಸಹಕಾರದಿಂದ ನಡೆಯುತ್ತಿದೆ. ಬೇರೆಯವರ ಒಳಿತಿನಲ್ಲಿ ನನ್ನ ಒಳಿತಿದೆ, ಎಂಬ ಸರಳ ಸತ್ಯವನ್ನು ಈ ಪಾದಯಾತ್ರೆ ನನಗೆ ತಿಳಿಸಿಕೊಟ್ಟಿತು. ನಾನು ಸಮಾಜದ ಒಂದು ಭಾಗವಾಗಿರುವುದರಿಂದ ನನ್ನಲ್ಲಾದ ಬದಲಾವಣೆ ಸಮಾಜದಲ್ಲಾದ ಒಂದು ಸಣ್ಣ ಬದಲಾವಣೆ ಎಂದರೆ ತಪ್ಪಾಗಲಾರದು. ಇನ್ನಷ್ಟು ಈ ರೀತಿಯ ಪಾದಯಾತ್ರೆಗಳು ಹೆಚ್ಚಾಗಿ ಇನ್ನಷ್ಟು ಜನ ವಾಸ್ತವದಲ್ಲಿ ಬದುಕುವಂತಾಗಲಿ ಎಂದು ಆಶಿಸುತ್ತೇನೆ.●

ಜನಪದ ಡೈರಿ

ವಿಶೇಷ ದತ್ತು ಕೇಂದ್ರ

ಯಾರಿಂದ ಯಾರಿಗೋ

ಸುಮಾರು ಒಂದೂವರೆ ವರ್ಷದ ಹಿಂದಿನ ಮಾತು. ಯುವ ದಂಪತಿಗಳು ಶಾಲು ಹೊದಿಸಿರುವ ಒಂದು ಮಗುವನ್ನು ಮಡಿಲಲ್ಲಿ ಹಿಡಿದು ನಮ್ಮ ಕಛೇರಿಗೆ ಬಂದರು. ಬನ್ನಿ ಕುಳಿತುಕೊಳ್ಳಿ ಎಂದೆ. ಅತ್ತಿತ್ತ ಯಾರೂ ಇಲ್ಲದ್ದನ್ನು ಗಮನಿಸಿ, 'ಸಾರ್ ಈ ಮಗು ನಮಗೆ ಬೇಡ. ನಿಮಗೆ ಕೊಟ್ಟು ಬಿಡಲು ಬಂದಿದ್ದೇವೆ' ಎಂದರು. 'ಏಕೆ' ಎಂದು ಕೇಳಿದೆ. ಮಗುವಿಗೆ ಸೀಳು ತುಟಿಯಿದೆ, ಅದಕ್ಕೆ ನಮಗೆ ಈ ಮಗು ಬೇಡ ಎನಿಸುತ್ತಿದೆ ಎಂದರು. ಮಗುವನ್ನು ತೋರಿಸಿ ಎಂದೆ. ನನ್ನ ಮೇಜಿನ ಮೇಲೆ ಮಗುವನ್ನು ಮಲಗಿಸಿ ಅದಕ್ಕೆ ಹೊದೆಸಿದ್ದ ಶಾಲನ್ನು ತೆಗೆದರು. ಸುಮಾರು ೧ ವಾರದ ಹೆಣ್ಣು ಮಗು. ಪಿಳಿ,ಪಿಳಿ ಕಣ್ಣು ಬಿಡುತ್ತಿದೆ. ಲಕ್ಷಣವಾಗಿದೆ. ಆದರೆ ಬಲಭಾಗದ ಮೇಲು ತುಟಿ ಸೀಳಿದೆ. ಬಾಯಿ ತೆರೆದು ನೋಡಿದೆ, ದವಡೆಯೂ ಸೀಳಿದೆ. ಶಸ್ತ್ರ ಚಿಕಿತ್ಸೆ ಮಾಡಿಸಿದರೆ ತುಟಿ ಸರಿಹೋಗುತ್ತದೆ. ಅದನ್ನು ಮಾಡಿಸಲು ನಾವು ಸಹಾಯ ಮಾಡುತ್ತೇವೆ. ಇಷ್ಟು ಸಣ್ಣ ಸಮಸ್ಯೆಗೆ ಮಗುವನ್ನು ಒಪ್ಪಿಸಿ ಬಿಡುವುದು ಸರಿಯಲ್ಲ ಎಂದೆ. ಸ್ವಲ್ಪ ಯೋಚನೆ ಮಾಡಿ ನಿರ್ಧರಿಸಿ ಎಂದೆ. ಅವರಿಬ್ಬರೂ ಎದ್ದು ಹೊರ ಹೋದರು. ಅರ್ಧ ತಾಸು ಬಿಟ್ಟು ಬಂದರು. ಏನು ತೀರ್ಮಾನಿಸಿದಿರಿ ? ಎಂದೆ. ಬೇಡ ಸಾರ್ ನಮಗೇಕೋ ಈ ಮಗು ನಮಗೆ ಒಗ್ಗಿ ಬರುವುದಿಲ್ಲ ಎನಿಸುತ್ತಿದೆ ಎಂದರು. ಆ ಗಂಡಸು ಹೋಗಲಿ, ಮಗುವಿನ ತಾಯಿಯೂ ಗಟ್ಟಿ ನಿರ್ಧಾರ ಮಾಡಿದ್ದಳು. ಹಲವು ರೀತಿಯ ಸಮಸ್ಯೆ ಇದ್ದರೂ ತಾವು ಹೆತ್ತ ಮಗುವೆಂದು ಕಷ್ಟ ಪಟ್ಟು ಅಕ್ಕರೆಯಿಂದ ಸಾಕುವ ತಾಯಂದಿರನ್ನು ನೋಡಿರುವ ನನಗೆ ಇವರ ನಿರ್ಧಾರವು ಸ್ವಲ್ಪ ವಿಚಿತ್ರವಾಗಿಯೇ ಕಂಡಿತು. ಬಹಳ ವ್ಯಾವಹಾರಿಕವಾಗಿದ್ದಾರೆ ಎಂದು ಕೂಡ ಮನಸ್ಸಿನಲ್ಲಿ ಅಂದುಕೊಂಡೆ

ಸರಿ ಮಗುವನ್ನು ಒಪ್ಪಿಸಿಕೊಳ್ಳಲು ಕಾಗದ ಪತ್ರಗಳನ್ನು ತಯಾರು ಮಾಡಿ, ಮಗುವನ್ನು ನಮ್ಮ ವಶಕ್ಕೆ ಪಡೆದೆವು. ಮಗುವಿಗೆ ಹೆಸರು ಇಟ್ಟಿದ್ದೀರಾ ಎಂದೆ. ಇಲ್ಲ ಎಂದರು. ನಾವೇ ಒಂದು ಸುಂದರ ಹೆಸರನ್ನು ಇಟ್ಟೆವು. ತುಟಿ ಸರಿಯಿಲ್ಲದ ಕಾರಣ ಬಾಟಲಿಯಲ್ಲಿ ಹಾಲು ಕೊಟ್ಟರೆ ಅದಕ್ಕೆ ಕುಡಿಯಲು ಆಗುತ್ತಿಲ್ಲ. ಹಾಲನ್ನು ನಿಪ್ಪಲ್ಲಿನಿಂದ ಎಳೆಯಲು ಹೋದರೆ ಎಳೆಯಲು ಆಗುವುದಿಲ್ಲ. ನಮ್ಮ ಕಾರ್ಯಕರ್ತರು ಚಮಚೆಯಲ್ಲಿ ನಿಧಾನವಾಗಿ ಹಾಲು ಕುಡಿಸಲು ಪ್ರಾರಂಭಿಸಿದರು. ಕೆಲವು ವಾರಗಳಲ್ಲಿ ಮಗುವಿನ ಆರೋಗ್ಯ ಸುಧಾರಿಸಿತು. ಸೀಳು ತುಟಿಯ ಮೊದಲನೇ ಶಸ್ತ್ರ ಚಿಕಿತ್ಸೆಯನ್ನು

ಮೈಸೂರಿನಲ್ಲಿ ಒಂದು ಸಂಸ್ಥೆಯ ನೆರವಿನಿಂದ ಮಾಡಿಸಿದೆವು.

ಏನಾದರಾಗಲಿ ಮಗುವನ್ನು ದತ್ತು ನೀಡಲು ಪ್ರಯತ್ನಿಸುವುದು ವಾಸಿ ಎಂದು ದತ್ತು ನೀಡಲು ಸರ್ಕಾರಿ ಜಾಲತಾಣದಲ್ಲಿ ಮಗುವಿನ ವಿವರ ಪ್ರಕಟಿಸಿದೆವು. ದೂರದ ಅಮೇರಿಕೆಯ ದಂಪತಿಗಳು ಈ ಮಗುವನ್ನು ದತ್ತು ಪಡೆಯಲು ಅರ್ಜಿ ಸಲ್ಲಿಸಿದರು. ವಿಡಿಯೋ ಮತ್ತು ವಾಟ್ಸ ಆಪ್ ಮೂಲಕ ಮಗುವನ್ನು ನೋಡಿದರು. ಮಗುವನ್ನು ದತ್ತು ಪಡೆಯುವ ತೀರ್ಮಾನ ಮಾಡಿದರು. ನಾವು ಓಡಾಡಿ ಮಗುವಿನ ಪಾಸ್ ಪೋರ್ಟ ಸಿದ್ಧ ಪಡಿಸಿದೆವು. ಫೆಬ್ರವರಿ ೭ ನೇ ತಾರೀಖಿನಂದು ಬಂದ ಆ ದಂಪತಿಗಳು ಬಹಳ ಸಂತೋಷದಿಂದ ಮಗುವನ್ನು ಪಡೆದು ತಮ್ಮ ದೇಶಕ್ಕೆ ಹಾರಿ ಹೋದರು. ಇಷ್ಟೆಲ್ಲಾ ಆಗುವ ಹೊತ್ತಿಗೆ ೨೦ ತಿಂಗಳು ಕಳೆದಿತ್ತು . ಮಗುವಿನ ಕಡತ ಮಗುವಿಗಿಂತಲೂ ಹೆಚ್ಚು ತೂಗುತ್ತಿತ್ತು.ನಿನ್ನೆಯ ದಿನ ಪೋಷಕರಿಂದ ಮಿಂಚಂಚೆ ಬಂತು. ಮಗಳು ಚೆನ್ನಾಗಿದ್ದಾಳೆ. ನಮ್ಮ ಮಗಳನ್ನು ೨೦ ತಿಂಗಳು ನೋಡಿಕೊಂಡದ್ದಕ್ಕೆ ವಂದನೆಗಳು ಎಂದು ಬರೆದಿದ್ದಾರೆ. ಇದು ಅವರ ಮಗುವಾದರೆ ನನಗೆ ಒಪ್ಪಿಸಿದವರು ಯಾರು? ನಮ್ಮೆಲ್ಲ ಸಂಬಂಧಗಳು ಭಾವನೆಯಲ್ಲಿದೆ ಎನಿಸಿತು. ಜೊತೆಗೆ ಧನ್ಯತೆಯ ಭಾವವೊಂದು ಮೂಡಿ ಹೋಯಿತು. ●

ವಾರ್ಷಿಕ ಸ್ನೇಹ ಮಿಲನ

ಜನವರಿ ೨೮, ಭಾನುವಾರದಂದು ಪ್ರತಿವರ್ಷದಂತೆ ಈ ವರ್ಷವೂ ದತ್ತು ಕೇಂದ್ರದ ವಾರ್ಷಿಕ ಸ್ನೇಹ ಮಿಲನವನ್ನು ಆಯೋಜಿಸಲಾಗಿತ್ತು. ಸಂಸ್ಥೆಯಿಂದ ದತ್ತು ಹೋದ ಮಕ್ಕಳು, ಅಪ್ಪ-ಅಮ್ಮಂದಿರು, ತಾತಾ-ಅಜ್ಜಿಯರು ಹೀಗೆ ಸುಮಾರು ೧೫೦ ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸಂಸ್ಥೆಯ ಸದಸ್ಯರಾದ ಶ್ರೀ ಕೆ.ಮನು ಅವರು ಮಕ್ಕಳಿಗೆ ಪ್ರಕೃತಿಯೊಂದಿಗೆ ಸಂಬಂಧ ಕಲ್ಪಿಸ ಬೇಕಾದ ಅಗತ್ಯವನ್ನು ಮತ್ತು ಅನಿವಾರ್ಯತೆಯನ್ನು ಕುರಿತು ಮಾತನಾಡಿದರು. ಡಾ.ಯು.ವಿ.ಶೆಣೈ ಯವರು ಮಾತನಾಡಿ ಮಕ್ಕಳ ಪೋಷಣೆಯಲ್ಲಿ ಮಕ್ಕಳಿಗೆ ನೀಡಬೇಕಾದ ಗುಣಮಟ್ಟದ ಸಮಯದ ಬಗ್ಗೆ ಚರ್ಚಿಸಿದರು. ಮೈಸೂರಿನ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರಾದ ಶ್ರೀ ಧನಂಜಯ, ಮಂಡ್ಯ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಶ್ರೀ ಅಶ್ವಥ್ ನಾರಾಯಣ ಮಕ್ಕಳೊಂದಿಗಿನ ಸಂವಹನವನ್ನು ಕುರಿತು ತಮ್ಮ ಅನುಭವ ಹಂಚಿಕೊಂಡರು.

ಮಕ್ಕಳ ಪ್ರತಿಭಾ ಪ್ರದರ್ಶನ ಕೂಡ ಇತ್ತು. ಅಲ್ಲದೆ ಮಕ್ಕಳ ಭಾವ ಚಿತ್ರಗಳ ಪ್ರದರ್ಶನವನ್ನೂ ಆಯೋಜಿಸಲಾಗಿತ್ತು. ಪೋಷಕರ ಮತ್ತು ಮಕ್ಕಳ ಪರಸ್ಪರ ಪರಿಚಯ ಈ ವಾರ್ಷಿಕ ಸ್ನೇಹ ಮಿಲನದಿಂದ ಆಗುತ್ತಿದೆ.●

ಸೇರ್ಪಡೆ

ಫೆಬ್ರವರಿ ತಿಂಗಳಲ್ಲಿ ದತ್ತು ಕೇಂದ್ರಕ್ಕೆ ಹೊಸದಾಗಿ ರಿಯಾ (೪ ತಿಂಗಳು), ಆಯುಷ್ (೯ ತಿಂಗಳು) ಮತ್ತು ಖುಷಿ (೪ ದಿನ) ಸೇರ್ಪಡೆಯಾದರು. ಸ್ವಲ್ಪ ಆಶಕ್ತವಾಗಿರುವ ಖುಷಿ ಸ್ವಲ್ಪ ಕೆಲವೇ ವಾರಗಳಲ್ಲಿ ಚೆನ್ನಾಗಿ ಆಗುತ್ತಾಳೆ ಎಂಬ ಭರವಸೆ ಇದೆ.●

ಜನಪದ ಖಾದಿ

ಕಳೆದ ಮಾಹೆ ಸಂಸ್ಥೆಯ ಖಾದಿ ಕೇಂದ್ರಕ್ಕೆ ಹಲವರು ಭೇಟಿ ನೀಡಿದರು. ಬೆಂಗಳೂರಿನ 'ಸೃಷ್ಟಿ ಸ್ಕೂಲ್ ಆಫ್ ಡಿಸೈನ್', ಸಂಸ್ಥೆಯ ವಿದ್ಯಾರ್ಥಿಗಳು ಹೊಸ ಜೀವನ ದಾರಿಯ ನೇಯ್ಗೆ ಕೇಂದ್ರಕ್ಕೆ ಭೇಟಿ ನೀಡಿದರು. ಖಾದಿ ಬಟ್ಟೆಯ ಹಿಂದಿನ ಆದರ್ಶ ಮತ್ತು ವಿಚಾರಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಲಾಯಿತು.

ಬಳ್ಳಾರಿ ಜಿಲ್ಲೆಯ ಕೊಟ್ಟೂರು ನೇಕಾರರ ಊರು. ಕರ್ನಾಟಕದ ಹಲವಾರು ಖಾದಿ ಸಂಸ್ಥೆಗಳಿಗೆ ಈ ಊರಿನವರು ಬಟ್ಟೆ ತಯಾರಿಸಿ ಕೊಡುತ್ತಾರೆ. ಆ ಊರಿನ ೧೫ ನೇಕಾರರು ಹೊಸ ಜೀವನ ದಾರಿ ಕೇಂದ್ರಕ್ಕೆ ಭೇಟಿ ನೀಡಿ, ಒಂದು ದಿನ ಇದ್ದು ಜನಪದ ಸೇವಾ ಟ್ರಸ್ಟಿನ ಖಾದಿ ಕೇಂದ್ರವು ಕಾರ್ಯ ನಿರ್ವಹಿಸುವ ರೀತಿಯನ್ನು ತಿಳಿದುಕೊಂಡು, ಅನೇಕ ವಿಷಯಗಳನ್ನು ಚರ್ಚಿಸಿದರು. ಕೇಂದ್ರ ನೇಕಾರರಿಗೆ ಹಮ್ಮಿಕೊಂಡಿರುವ ಹಲವು ಕಾರ್ಯಕ್ರಮಗಳು ಮತ್ತು ಕೇಂದ್ರದ ವಾತಾವರಣವನ್ನು ಬಹಳವಾಗಿ ಮೆಚ್ಚಿ ಕೊಂಡರು.

ಶಿಬಿರ

ಫೆಬ್ರವರಿ ೧೨ ಮತ್ತು ೧೩ ರಂದು ಬೆಂಗಳೂರಿನ ಪ್ರಕ್ರಿಯಾ ಶಾಲೆಯ ೮ ನೇ ತರಗತಿಯ ಮಕ್ಕಳಿಗೆ 'ನಾರಿನಿಂದ ಬಟ್ಟೆಯವರಗೆ' ಎಂಬ ವಿಷಯಾಧಾರಿತ ಶಿಬಿರವನ್ನು ಏರ್ಪಡಿಸಲಾಗಿತ್ತು. ಮಕ್ಕಳಿಗೆ ಖಾದಿ ಚರಿತ್ರೆ, ಖಾದಿಯ ಮಹತ್ವ, ಅದರ ಅರ್ಥಶಾಸ್ತ್ರವನ್ನು ತಿಳಿಸಲಾಯಿತು. ನೇಯ್ಗೆ ಕೇಂದ್ರದಲ್ಲಿ ಕೆಲಸದ ಅನುಭವವನ್ನು ನೀಡಲಾಯಿತು. ಬಟ್ಟೆಗೆ ನೈಸರ್ಗಿಕ ಬಣ್ಣ ಹಾಕುವ ರೀತಿಯನ್ನು ತಿಳಿಸಲಾಯಿತು. ಮನು, ಸುಹಾಸಿನಿ, ಸುರೇಶ್ ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.



ರಾಟೆಯ ಕೆಲಸದಲ್ಲಿ ನಿರತರಾದ ಮಕ್ಕಳು

ಫೆಬ್ರವರಿ ೨೩ ರಿಂದ ೨೫ ರವರಗೆ ಬೆಂಗಳೂರಿನ ನಾಗಾರ್ಜುನ ಕಾಲೇಜಿನ ಮೊದಲ ವರ್ಷದ ಪದವಿ ವಿದ್ಯಾರ್ಥಿಗಳಿಗೆ 'ಪರಿಸರ, ಅಭಿವೃದ್ಧಿ ಮತ್ತು ಜೀವನ ಶೈಲಿ' ವಿಚಾರ ಕುರಿತ ಶಿಬಿರವನ್ನು ಏರ್ಪಡಿಸಲಾಗಿತ್ತು. ಮನು, ರವಿಕುಮಾರ್, ಸಂತೋಷ ಕೌಲಗಿ ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಕಲ್ಲೇಶಿ ಮತ್ತು ಸುಮನ್ ಸ್ವಯಂಸೇವಕರಾಗಿ ಕೆಲಸ ಮಾಡಿದರು.

ತಿಂಗಳ ಕವನಕ್ಕೊಂದು ಟಿಪ್ಪಣಿ

ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರ 'ಕನ್ನಡಿಯ ಸೂರ್ಯ' ಹಿಂದೂ ಸಮಾಜದಲ್ಲಿನ ಬಾಲವಿಧವೆಯ ಸ್ಥಿತಿಯನ್ನು ಮನಕಲಕುವ ರೀತಿಯಲ್ಲಿ ಕಟ್ಟಿಕೊಡುವ ಒಂದು ಕವಿತೆ. ಹೊರಗಿನ ನಿಸರ್ಗದಲ್ಲಿನ ಸ್ಥಿತ್ಯಂತರ, ವಿಧವೆಯ ಒಳಬಾಳಿನ ತಳಮಳ ಎರಡೂ ಬಿಂಬ, ಪ್ರತಿಬಿಂಬಗಳಂತೆ ತಳಕು ಹಾಕಿಕೊಂಡು ಈ ಕವಿತೆಯ ಭಾವತೀವ್ರತೆಯನ್ನು ಶೃಂಗಸ್ಥಿತಿಗೆ ಕೊಂಡೊಯ್ಯುತ್ತವೆ. ಎಳೆಯ ಬಾಲಕನೊಬ್ಬ ತಾಯಿಯ ಚಲನವಲನಗಳನ್ನು ಗಮನಿಸುತ್ತಾ, ಜೊತೆಜೊತೆಗೇ ಅಪ್ರಜ್ಞಾಪೂರ್ವಕವಾಗಿ ಬಾಹ್ಯಪ್ರಕೃತಿಯ ವಾತಾವರಣವನ್ನು ಅವುಗಳೊಂದಿಗೆ ಸಮೀಕರಿಸುತ್ತಾ ತನ್ನ ಅನುಭವವೊಂದನ್ನು ವಿವರಿಸುವ ಧಾಟಿಯಲ್ಲಿ ಕವಿತೆ ಸಾಗುತ್ತದೆ. ಕವಿತೆಯುದ್ದಕ್ಕೂ ನಿಟ್ಟುಸಿರು ಕೇಳಿಸುತ್ತದೆ; ವಿಷಾದ ತೊಟ್ಟಿಕ್ಕುತ್ತದೆ.

ಆಕೆ ಹದಿನೆಂಟು ತುಂಬುವ ಮೊದಲೇ ಗಂಡನನ್ನು ಕಳೆದುಕೊಂಡಿದ್ದಾಳೆ. ಕುಂಕುಮವಿಲ್ಲದ ಹಣೆ ಭಣಗುಟ್ಟುತ್ತಿದೆ. ಒಂದು ಆಷಾಢದ ಮುಂಜಾನೆ ಆಕೆ ಪೂರ್ವದಿಕ್ಕಿನ ಕಿಟಕಿಯ ಮೂಲಕ ಆಕಾಶವನ್ನೇ ಶೂನ್ಯದೃಷ್ಟಿಯಿಂದ ನೋಡುತ್ತಾ ಕುಳಿತಿದ್ದಾಳೆ. ಸೂರ್ಯನಿನ್ನೂ ಮೂಡಿಲ್ಲ. ಆಕಾಶದ ತುಂಬ 'ಮೆಕ್ಕೆಹಣ್ಣಂಥ ಆಷಾಢದ ಮೋಡ'. ಅಂತರಂಗದಲ್ಲಿ ದಟ್ಟವಾಗಿ ಕವಿದಿರುವ ಮೋಡ ಅವಳ ಮುಖದಲ್ಲಿಯೂ ಪ್ರತಿಫಲಿಸುತ್ತಿವೆ. ಮುಗ್ಧ ಬಾಲಕನ ಎಳೆಯ ಕಣ್ಣುಗಳು ಇವೆಲ್ಲವನ್ನೂ ತುಂಬಿಕೊಳ್ಳುತ್ತಿವೆ.

ಹೊರಗೆ ನಿಧಾನವಾಗಿ ಮಳೆ ಹನಿಯಲು ಪ್ರಾರಂಭಿಸಿ, ಕ್ರಮೇಣ ರಭಸಗೊಳ್ಳುತ್ತಿದೆ. ಪ್ರಾಯಃ ಆ ತಾಯಿಯ ಕಣ್ಣುಗಳಲ್ಲೂ ನೀರು. ಎದ್ದು, ಕಿಟಕಿ ಮುಚ್ಚಿ, ಒಳಕೋಣೆಯಲ್ಲಿ ನಿಂತವಳನ್ನು ಹಿಂಬಾಲಿಸಿದ ಬಾಲಕನಿಗೆ: "...ಕನ್ನಡಿಯಲ್ಲಿ ಕಾಣುತ್ತಿತ್ತು ಅಮ್ಮನ ಮುಖ, ಬೆಳ್ಳನೆ ಹಣೆ, ಕೆದರಿ ಹಾರುವ ಮುಡಿ; ಸುಮ್ಮನೆ ನೋಡುತ್ತಾ ಕೂತಿದ್ದಳು ಅಮ್ಮ...". ತಾಯ ನಿಟ್ಟುಸಿರು ಹೊರಗಿನ ಮಳೆಯ ರಭಸದಲ್ಲಿ ವಿಲೀನಗೊಳ್ಳುತ್ತದೆ. ಈಗ ಕವಿತೆ ಒಂದು ತಿರುವು ಪಡೆಯುತ್ತದೆ. ಕನ್ನಡಿಯಲ್ಲಿ ತನ್ನ ಬರಿದಾದ ಮುಖವನ್ನೇ ದಿಟ್ಟಿಸುತ್ತಿದ್ದ ಆಕೆ ಇದ್ದಕ್ಕಿದ್ದಂತೆಕುಂಕುಮದ ಭರಣಿಯನ್ನು ಮೆಲ್ಲಗೆ ಕಂಪಿಸುವ ಕೈಯಲ್ಲಿ ತೆಗೆದುಕೊಳ್ಳುತ್ತಾಳೆ. ಕುಂಕುಮಭಾಗ್ಯ ತನ್ನ ಪ್ರತಿಬಿಂಬಕ್ಕಾದರೂ ಇರಲಿ ಎಂದುಕೊಂಡಿರಬೇಕು ಆಕೆ. ಕನ್ನಡಿಯಲ್ಲಿ ಕಾಣುವ ತನ್ನ ಹಣೆಗೆ ದುಂಡಗೆ ಕುಂಕುಮವಿ-ರಿಸುತ್ತಾಳೆ. ಅವಳ ಮುಖ 'ಮಳೆನಿಂತು ತೊಳೆದ ಆಕಾಶದಂತೆ' ಅಲಂಕಾರರಹಿತವಾಗಿದೆ; ನಿರ್ಭಾವುಕವಾಗಿದೆ. ಕನ್ನಡಿಯ ಕುಂಕುಮ ಸೂರ್ಯನಂತೆ ಹೊಳೆಯುತ್ತಿದೆ. ಈಗ ಆಕೆಯ ಪಾಲಿಗಿರುವುದು ಕೇವಲ 'ಕನ್ನಡಿಯ ಸೂರ್ಯ'.

ನಿರೂಪಣೆಯಲ್ಲಿ ಸರಳ ನಿರಾಡಂಬರವಾಗಿರುವ ಈ ಕವಿತೆ ಓದುಗರ ಹೃದಯವನ್ನು ಹಿಂಡುವಂತಿದೆ. ಬೇಂದ್ರೆಯವರ 'ಪುಟ್ಟ ವಿಧವೆ' ಕವಿತೆಯಲ್ಲಿಯಂತೆಯೇ, ಬದುಕಿನ ಸವಿ-ಸ್ವಾರಸ್ಯಗಳನ್ನು ಕಳೆದುಕೊಂಡ ಈ ಪುಟ್ಟ ವಿಧವೆಯ ಸ್ಥಿತಿಯೂ 'ಮುಳ್ಳುಕಂಟಿಯ ಮೇಲೆ ಎಸೆದ ಹೂಮಾಲೆ'ಯಂತಾಗಿದೆ.

– ಎನ್. ಶ್ರೀನಿವಾಸ ಉಡುಪ




೧೦೦ ವರ್ಷದ ಹಿಂದೆ ಗಾಂಧಿ

೧೯೧೮ ಮಾರ್ಚ ಮಾಹೆಯು ಗಾಂಧಿಯವರ ಬದುಕಿನ ಪ್ರಮುಖ ತಿಂಗಳುಗಳಲ್ಲಿ ಒಂದು. ಈ ತಿಂಗಳಲ್ಲಿ ಗಾಂಧಿ ಸಬರಮತಿ ಆಶ್ರಮದಲ್ಲಿದ್ದಾರೆ. ಎರಡು ಪ್ರಮುಖ ಹೋರಾಟಗಳಲ್ಲಿ ಅವರು ತೊಡಗಿಕೊಂಡಿದ್ದಾರೆ ಮತ್ತು ಮೂರನೆಯ ಹೋರಾಟವನ್ನು ಈ ತಿಂಗಳು ಪ್ರಾರಂಭಿಸುತ್ತಾರೆ. ಬಿಹಾರದ ಚಂಪಾರಣ್ಯ ಹೋರಾಟ ಒಂದು ಕಡೆಯಾದರೆ, ಮತ್ತೊಂದು ಕಡೆ ಅಹಮದಾಬಾದಿನಲ್ಲಿ ಗಿರಣಿ ಕಾರ್ಮಿಕರ ಹೋರಾಟ ನಡೆಸಿದ್ದಾರೆ. ಈ ತಿಂಗಳ ಅಂತ್ಯದಲ್ಲಿ ಪ್ರಸಿದ್ಧ ಖೇಡಾ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ.

ಈ ತಿಂಗಳು ಗಾಂಧಿಯವರ ಹೋರಾಟದ ಬದುಕಿನಲ್ಲಿ ಪ್ರಮುಖವಾದುದು. ಏಕೆಂದರೆ, ಗಾಂಧಿ ಭಾರತದಲ್ಲಿ ಉಪವಾಸ ಸತ್ಯಾಗ್ರಹವನ್ನು ಮೊದಲ ಬಾರಿಗೆ ಪ್ರಯೋಗಿಸಿದ ತಿಂಗಳು ಇದಾಗಿದೆ. ಈ ಉಪವಾಸ ಸತ್ಯಾಗ್ರಹವನ್ನು ಗಿರಣಿ ಮಾಲೀಕರ ವಿರುದ್ಧ ನಡೆಸಿದ್ದಾರೆ. ಮಾರ್ಚ ೧೫ ರಿಂದ ೧೮ರವರಗೆ ಕೈಗೊಂಡ ಉಪವಾಸ ಸತ್ಯಾಗ್ರಹವು ಅವರು ಭಾರತದಲ್ಲಿ ನಡೆಸಿದ ಮೊದಲ ಉಪವಾಸ ಸತ್ಯಾಗ್ರಹವಾಗಿದೆ. ಗಿರಣಿ ಕಾರ್ಮಿಕರನ್ನು ಉದ್ದೇಶಿಸಿ ಅವರು ಈ ಮಾಹೆಯಲ್ಲಿ ಬರೆದ ೧೪ ಹಸ್ತ ಪತ್ರಿಕೆಗಳು ಬಹಳ ಪ್ರಮುಖವಾದವು. ಕಾರ್ಮಿಕ ಸಂಘಟನೆ ಎಂದರೆ ಕೇವಲ ಗಿರಣಿ ಮಾಲೀಕರ ವಿರುದ್ಧ ಹೋರಾಟ ಅಲ್ಲವೆಂದು ನಂಬಿದ್ದ ಗಾಂಧಿ ಈ ಹಸ್ತ ಪತ್ರಿಕೆಗಳಲ್ಲಿ ಗಿರಣಿ ಕಾರ್ಮಿಕರನ್ನು ಸತ್ಯಾಗ್ರಹಕ್ಕೆ ಅಣಿಗೊಳಿಸುವ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಕಾರ್ಮಿಕರಿಗೆ ಧೈರ್ಯ ತುಂಬಲು ದಕ್ಷಿಣ ಆಫ್ರಿಕಾದ ತಮ್ಮ ಗೆಲುವಿನ ಹೋರಾಟದ ವಿಷಯಗಳನ್ನೂ ಆ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಹೋರಾಟಗಾರನಿಗೆ ಇರಬೇಕಾದ ನೈತಿಕತೆಯ ಅನೇಕ ವಿಚಾರಗಳನ್ನು ಅದರಲ್ಲಿ ಕಾರ್ಮಿಕರಿಗೆ ತಿಳಿಸುತ್ತಾರೆ. ಗಾಂಧಿ ನಡೆಸುತ್ತಿರುವ ಹೋರಾಟದ ರೀತಿಯನ್ನು ಕಂಡು ಅಂದಿನ ಜಿಲ್ಲಾಧಿಕಾರಿ, ಗಾಂಧಿಗೆ ಖಾಸಗಿಯಾಗಿ 'ಹೋರಾಟದಲ್ಲಿ ಪರಸ್ಪರ ವಿರೋಧಿ ಬಣಗಳು ಇಷ್ಟೊಂದು ಸೌಹಾರ್ದವಾಗಿ ನಡೆದು ಕೊಳ್ಳಬಲ್ಲವೆಂದು ನಾನೂ ಊಹಿಸಿಯೂ ಇರಲಿಲ್ಲ' ಎನ್ನುತ್ತಾರೆ.

ಗುಜರಾತಿನ ಖೇಡಾದಲ್ಲಿ, ರೈತರು ಸರ್ಕಾರ ವಿಧಿಸಿರುವ ಭಾರಿ ತೆರಿಗೆಯ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಅದರ ವಿರುದ್ಧ ಗಾಂಧಿ ಸತ್ಯಾಗ್ರಹವನ್ನು ಮಾರ್ಚ ೨೨ ರಂದು ವಲ್ಲಭ್‌ಬಾಯಿ ಪಟೇಲ್ ಮತ್ತು ಇತರರ ಜೊತೆಗೂಡಿ ಪ್ರಾರಂಭಿಸಿದ್ದಾರೆ. ಅಂದು ಅವರು ನಡೆಸಿದ ಸಾರ್ವಜನಿಕ ಸಭೆಯಲ್ಲಿ ೫೦೦೦ ಕ್ಕೂ ಮೀರಿ ರೈತರು ಭಾಗವಹಿಸಿದ್ದಾರೆ. ಯಾವುದೇ ಕಾರಣಕ್ಕೂ ತಾವು ಸರ್ಕಾರಕ್ಕೆ ತೆರಿಗೆ ಸಲ್ಲಿಸುವುದಿಲ್ಲವೆಂದು ಶಪಥಮಾಡಿದ್ದಾರೆ.

ತಿಂಗಳ ಚಿತ್ರ



ಬದನವಾಳು ಖಾದಿ ಕೇಂದ್ರದ ನೂಲುಗಾರ ಮಹಿಳೆ

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651581 9739743237

KA/SK/MND/470/2015-17
Regd No KAR/KAN/2000/3820

ತೆರೆದ ಅಂಚೆ

ಶ್ರೀಮತಿ/ಶ್ರೀ

Mr Santhosh Sheelvantha
1556, 4/13, Main, E And F Block, 2nd Stage Ramakrishna Nagar,
Mysore
570022